# ಕರ್ನಾಟಕ ವಿಧಾನ ಸಭೆ

ಬುಧವಾರ 24ನೇ ಆಗಸ್ಟ್ 1994

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11-05 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು (ಶ್ರೀ ವಿ. ಎಸ್. ಕೌಜಲಗಿ) ರವರು ಪೀಠವನ್ನು ಅಲಂಕರಿಸಿದ್ದರು.

## ಸಂತಾಪ ಸೂಚನೆಗಳು

### ಹಾಲಿ ಸಚಿವರಾಗಿದ್ದ ಶ್ರೀ ಟಿ. ಎಂ. ಮಂಜುನಾಥ್, ಮತ್ತಿತರರ ನಿಧನದ ಬಗ್ಗೆ

ಅಧ್ಯಕ್ಷರು.—ಪ್ರಸ್ತುತ ಸಚಿವ ಸಂಪುಟದ ಸಚಿವರಾಗಿದ್ದ ಶ್ರೀ ಟಿ. ಎಂ. ಮಂಜುನಾಥ್, ಹಾಲಿ ವಿಧಾನಸಭಾ ಸದಸ್ಯರುಗಳಾಗಿದ್ದ ಶ್ರೀ ಎಂ. ಸಿದ್ಧಮಾದಯ್ಯ, ಶ್ರೀ ಎಸ್. ಎಫ್. ಪಾಟೀಲ್, ಪಂಜಾಬಿನ ರಾಜ್ಯಪಾಲರಾಗಿದ್ದ ಶ್ರೀ ಸುರೇಂದ್ರನಾಥ್, ಮಾಜಿ ವಿಧಾನಸಭಾ ಸದಸ್ಯರುಗಳಾದ ಶ್ರೀಯುತರುಗಳಾದ ಎಂ. ಬಸವರಾಜು, ಎಂ. ನಂಜೆ ಗೌಡ, ಎಂ. ಮಾದಯ್ಯ, ಎ. ಚಿನ್ನಪ್ಪ, ಪಿ. ರಾಮ್‌ದೇವ್, ಆಲೂರು ಹನುಮಂತಪ್ಪ, ಟಿ. ಆರ್. ಪರಮೇಶ್ವರಯ್ಯ, ಎ. ಮುನಿಯಪ್ಪ, ಬಿ. ಎಂ. ಸಾಣಿಕೊಪ್ಪ ಮತ್ತು ಎಂ. ಆನಂದರಾವ್ ಹಾಗೂ ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಅತಿವೃಷ್ಟಿಯಿಂದ ಬಹಳಷ್ಟು ಜನರು ಮೃತಪಟ್ಟಿರುವುದನ್ನು ಈ ಸದನಕ್ಕೆ ಪಿಪಾದದಿಂದ ತಿಳಿಸಲಿಚ್ಚಿಸುತ್ತೇನೆ.

೧. ಪ್ರಸ್ತುತ ಸಚಿವ ಸಂಪುಟದ ಸಚಿವರಾಗಿದ್ದಂತಹ ಶ್ರೀ ಟಿ. ಎಂ. ಮಂಜುನಾಥ್ ಅವರು ದಿನಾಂಕ ೨೧ನೇ ಮೇ ೧೯೯೪ ರಂದು ನಿಧನರಾದರು.

ದಿವಂಗತರು ೫ ಮತ್ತು ೬ನೇ ವಿಧಾನಸಭೆಗೆ ತಾವುಕೂರು ಜಿಲ್ಲೆ ತಿಪಟೂರು ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಶ್ರೀ ಬಂಗಾರಪ್ಪನವರ ಸಚಿವ ಸಂಪುಟದಲ್ಲಿ ವಿಮಾ ಮತ್ತು ಲಾಟರಿ ಖಾತೆಯ ರಾಜ್ಯ ಸಚಿವರಾಗಿ ದಂತರ ಶ್ರೀ ಎಂ. ವೀರಪ್ಪ ಮೊಯಿಲಿ ಅವರ ಸಚಿವ ಸಂಪುಟದಲ್ಲಿ ಯೋಜನೆ ಮತ್ತು ಸಾಂಖ್ಯಿಕ ಹಣಕಾಸು ರಾಜ್ಯ ಸಚಿವರಾಗಿ ಅನಂತರ ಸರ್ಕಾರಿ ಖಾತೆಯ ಸಂಪುಟ ದರ್ಜೆಯ ಸಚಿವರಾಗಿದ್ದರು. ತಿಪಟೂರಿನಲ್ಲಿರುವ ಕಲ್ಪತರು ವಿದ್ಯಾಸಂಸ್ಥೆಯನ್ನು ಸ್ಥಾಪಿಸಿ ಅದರ ಬೆಳವಣಿಗೆಗೆ ಶ್ರಮಿಸಿದವರಲ್ಲಿ ಪ್ರಮುಖರಾಗಿದ್ದರು. ತಿಪಟೂರಿನ ಎಪಿಎಂಸಿ, ಜಿಲ್ಲಾಪರಿಷತ್ತು ಮತ್ತು ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷರುಗಳಾಗಿ ತಿಪಟೂರು ಕ್ಷೇತ್ರದ ಅಭಿವೃದ್ಧಿಗೆ ತಮ್ಮ ಗಣನೀಯ ಸೇವೆಯನ್ನು ಸಲ್ಲಿಸಿರುತ್ತಾರೆ.

೨. ವಿಧಾನಸಭೆಯ ಹಾಲಿಸದಸ್ಯರಾದ ಶ್ರೀ ಎಂ. ಸಿದ್ಧಮಾದಯ್ಯನವರು ದಿನಾಂಕ ೧೭ನೇ ಜೂನ್ ೧೯೯೪ ರಂದು ನಿಧನರಾದರು.

ಶ್ರೀಯುತರು ೫, ೬ ಮತ್ತು ೯ನೇ ವಿಧಾನಸಭೆಗೆ ಮೈಸೂರು ಜಿಲ್ಲೆಯ ಕೊಳ್ಳೇಗಾಲ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಕೊಳ್ಳೇಗಾಲ ತಾಲ್ಲೂಕಿನ ಮಾಂಬಳ್ಳಿ ಗ್ರಾಮ ಪಂಚಾಯಿತಿಯ ಸದಸ್ಯರಾಗಿ, ಯಳಂದೂರು ತಾಲ್ಲೂಕು ಅಭಿವೃದ್ಧಿ ಮಂಡಳಿಯ ಉಪಾಧ್ಯಕ್ಷರಾಗಿ ಹಾಗೂ ಮೈಸೂರು ಜಿಲ್ಲಾ ಅಭಿವೃದ್ಧಿ ಕೌನ್ಸಿಲ್‌ನ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ.

೩. ವಿಧಾನಸಭೆಯ ಹಾಲಿ ಸದಸ್ಯರಾದ ಶ್ರೀ ಸಿದ್ಧನಗೌಡ ಪಕೀರಗೌಡ ಪಾಟೀಲ್ ಅವರು ದಿನಾಂಕ ೯ನೇ ಆಗಸ್ಟ್ ೧೯೯೪ ರಂದು ನಿಧನರಾದರು.

ದಿವಂಗತರು ಧಾರವಾಡ ಜಿಲ್ಲೆಯ ನರಗುಂದ ವಿಧಾನಸಭಾ ಕ್ಷೇತ್ರದಿಂದ ಒಂಭತ್ತನೆ ವಿಧಾನಸಭೆಗೆ ಆಯ್ಕೆಯಾಗಿದ್ದರು. ಸಹಕಾರ ಚಳುವಳಿಯ ಧುರೀಣರಾಗಿದ್ದು ನರಗುಂದ ನಗರಸಭೆಯ ಅಧ್ಯಕ್ಷರಾಗಿ

ಧಾರವಾಡ ಜಿಲ್ಲಾ ಸಹಕಾರ ಮಾರುಕಟ್ಟೆ ಮಹಾ ಮಂಡಳಿಯ ಅಧ್ಯಕ್ಷರಾಗಿ, ಕರ್ನಾಟಕ ರಾಜ್ಯ ಸಹಕಾರಿ ಮಾರುಕಟ್ಟೆ ಮಹಾ ಮಂಡಳಿಯ ನಿರ್ದೇಶಕರಾಗಿ, ಕರ್ನಾಟಕ ಕೇಂದ್ರ ಸಹಕಾರ ಬ್ಯಾಂಕಿನ ನಿರ್ದೇಶಕರಾಗಿ ಕರ್ನಾಟಕ ರಾಜ್ಯ ಹತ್ತಿ ಸಮಿತಿಯ ಸದಸ್ಯರಾಗಿ ಹಾಗೂ ಕರ್ನಾಟಕ ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಅಧ್ಯಕ್ಷರಾಗಿ ತಮ್ಮ ಅಮೂಲ್ಯವಾದ ಸೇವೆಯನ್ನು ಸಲ್ಲಿಸಿರುವರು.

೪. ಪಂಜಾಬ್ ಮತ್ತು ಹಿಮಾಚಲ ಪ್ರದೇಶದ ರಾಜ್ಯಪಾಲರಾದ ಶ್ರೀ ಸುರೇಂದ್ರನಾಥ್ ಅವರು ದಿನಾಂಕ ೯ನೇ ಜುಲೈ ೧೯೯೪ ರಂದು ವಿಮಾನ ದುರಂತದಲ್ಲಿ ಸಾವನ್ನಪ್ಪಿದರು. ಚಂಡಿಘಢದಿಂದ ಹಿಮಾಚಲ ಪ್ರದೇಶದ ಕುಲು ಸಮೀಪವಿರುವ ಭುಂತರ್ ವಿಮಾನ ನಿಲ್ದಾಣಕ್ಕೆ ಹೊರಟ್ಟಿದ್ದ 'ಕಿಂಗ್ ಏರ್' ವಿಮಾನವು ಕುಲು ಕಣಿವೆಯಲ್ಲಿ ಧರೆಗುರುಳಿ ಸಂಭವಿಸಿದ ದುರಂತದಲ್ಲಿ ಮಾನ್ಯ ರಾಜ್ಯಪಾಲರಾದ ಶ್ರೀ ಸುರೇಂದ್ರನಾಥ್ ಹಾಗೂ ಅವರ ಪತ್ನಿ ಮತ್ತು ಅವರ ಕುಟುಂಬದ ಎಂಟು ಮಂದಿ ಮೃತಪಟ್ಟರು.

ದಿವಂಗತರಾದ ಶ್ರೀ ಸುರೇಂದ್ರನಾಥ್ ಅವರು ಚಂಡಿಘಢದ ಆಡಳಿತಗಾರರಾಗಿ ಸಹ ಸೇವೆ ಸಲ್ಲಿಸಿರುತ್ತಾರೆ.

೫. ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ. ಬಸವರಾಜು ಅವರು ದಿನಾಂಕ ೬ನೇ ಮೇ ೧೯೯೪ ರಂದು ನಿಧನರಾದರು.

ಶ್ರೀಯುತರು ಮೈಸೂರು ಜಿಲ್ಲೆಯ ಕೆ. ಆರ್. ನಗರ ವಿಧಾನಸಭಾ ಕ್ಷೇತ್ರದಿಂದ ನಾಲ್ಕನೆ ವಿಧಾನಸಭೆಗೆ ಆಯ್ಕೆಯಾಗಿದ್ದರು. ೧೯೮೦ರಲ್ಲಿ ದಿವಂಗತರು ರಾಜ್ಯಸಭೆಗೆ ಚುನಾಯಿತರಾಗಿದ್ದರು. ಕ್ವಿಟ್ ಇಂಡಿಯಾ ಚಳುವಳಿ, ಕಿಸಾನ್ ಚಳುವಳಿ ಮತ್ತು ವಿವಿಧ ವ್ಯಾಪಾರಿ ಒಕ್ಕೂಟದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ, ತಾಲ್ಲೂಕು ಮಂಡಳಿಯ ಸದಸ್ಯರಾಗಿ ಹಾಗೂ ದೀನದಲಿತರ ಏಳಿಗೆಗಾಗಿ ವಿಶೇಷ ಆಸಕ್ತಿ ವಹಿಸಿ ದುಡಿದಿರುತ್ತಾರೆ.

೬, ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ. ನಂಜೇಗೌಡ ಅವರು ದಿನಾಂಕ ೧೬ನೇ ಜೂನ್ ೧೯೯೪ ರಂದು ನಿಧನರಾದರು.

ಶ್ರೀಯುತರು ಹಾಸನ ಜಿಲ್ಲೆಯ ಗುಡಸಿ ಕ್ಷೇತ್ರದಿಂದ ಐದನೆ ವಿಧಾನಸಭೆಗೆ ಆಯ್ಕೆಯಾಗಿದ್ದರು ಕ್ಷೇತ್ರದ ಹಲವಾರು ಸಂಘ ಸಂಸ್ಥೆಗಳಲ್ಲಿ ಮತ್ತು ಕ್ಷೇತ್ರದ ಏಳಿಗೆಗಾಗಿ ಶ್ರಮಿಸಿರುತ್ತಾರೆ.

೭. ವಿಧಾನಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ. ಮಾದಯ್ಯ ಅವರು ದಿನಾಂಕ ೧೩ನೇ ಜೂನ್ ೧೯೯೪ ರಂದು ನಿಧನರಾದರು.

ಶ್ರೀಯುತರು ಹಲವಾರು ವರ್ಷಗಳ ಕಾಲ ಮೈಸೂರು ವಿಧಾನಪರಿಷತ್ತಿನ ಸದಸ್ಯರಾಗಿದ್ದರು. ೧೯೫೬ರಲ್ಲಿ ನಂಜನಗೂಡು ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದರು. ಹಾಗೂ ಮೊದಲನೆ ವಿಧಾನಸಭೆಯ ಉಪಾಧ್ಯಕ್ಷರಾಗಿದ್ದರು. ೧೯೬೪-೭೦ರ ಅವಧಿಯಲ್ಲಿ ಮೈಸೂರು ವಿಧಾನಪರಿಷತ್ತಿನ ಉಪಸಭಾಪತಿಯಾಗಿ ಕೂಡ ಸೇವೆ ಸಲ್ಲಿಸಿರುತ್ತಾರೆ. ಮೈಸೂರು ವಯಸ್ಕರ ಶಿಕ್ಷಣ ಕೌನ್ಸಿಲ್‌ನ ಸ್ಥಾಪಕರು, ಮೈಸೂರು ಯೂನಿವರ್ಸಿಟಿ ಸೆನೆಟ್ ಮತ್ತು ಯುನಿವರ್ಸಿಟಿ ಕೌನ್ಸಿಲ್‌ನ ಸದಸ್ಯರಾಗಿ ಸದರಿ ಶಿಕ್ಷಣ ಸಂಸ್ಥೆಗಳ ಅಭಿವೃದ್ಧಿಗಾಗಿ ಶ್ರಮಿಸಿರುತ್ತಾರೆ. ಹರಿಜನ ಮತ್ತು ಗಿರಿಜನರ ಪುರೋಭಿವೃದ್ಧಿಗಾಗಿ ಕೂಡ ಶ್ರಮಿಸಿರುತ್ತಾರೆ.

೮. ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಎ, ಚನ್ನಪ್ಪನವರು ದಿನಾಂಕ ೧೭ನೇ ಜೂನ್ ೧೯೯೪ ರಂದು ನಿಧನರಾದರು.

ಶ್ರೀಯುತರು ಎಂಟನೆ ವಿಧಾನಸಭೆಗೆ ಕೋಲಾರ ಜಿಲ್ಲೆಯ ಬೇತಮಂಗಲ ವಿಧಾನಸಭಾ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಬೇತಮಂಗಲ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾಗಿ ಕ್ಷೇತ್ರದ ಅಭಿವೃದ್ಧಿಗೆ ದುಡಿದಿರುತ್ತಾರೆ.

೯. ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಪಿ. ರಾಮದೇವ್ ಅವರು ದಿನಾಂಕ ೨೨ನೇ ಜೂನ್ ೧೯೯೪ ರಂದು ನಿಧನರಾದರು.

ಶ್ರೀಯುತರು ೬ ಮತ್ತು ೭ನೇ ವಿಧಾನಸಭೆಗೆ ಬೆಂಗಳೂರಿನ ಮಲ್ಲೇಶ್ವರಂ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಭೂಧಾನ ಚಳುವಳಿಯ ಸರ್ವೋದಯ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಶ್ರೀ ಜಯಪ್ರಕಾಶ್ ನಾರಾಯಣ್ ಅವರ ಲೋಕ ಸಂಘರ್ಷ ಸಮಿತಿಯ ಕರ್ನಾಟಕ ಶಾಖೆಗೆ ಕಾರ್ಯದರ್ಶಿಯಾಗಿದ್ದರು. ಮಲ್ಲೇಶ್ವರಂ ಸಹಕಾರಿ ಬ್ಯಾಂಕಿನ ಅಧ್ಯಕ್ಷರಾಗಿ, ಮಹಾನಗರ ಪಾಲಿಕೆಯ ಸದಸ್ಯರಾಗಿ ಅಲ್ಲದೆ, ಸಹಕಾರ ಕ್ರೀಡೆ ಮತ್ತು ಕಾರ್ಮಿಕ ರಂಗಗಳಲ್ಲಿ ತಮ್ಮ ಗಣನೀಯ ಸೇವೆ ಸಲ್ಲಿಸಿರುತ್ತಾರೆ.

೧೦. ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಆಲೂರು ಹನುಮಂತಪ್ಪನವರು ದಿನಾಂಕ ೨೭ನೇ ಜೂನ್ ೧೯೯೪ ರಂದು ನಿಧನರಾದರು.

ದಿವಂಗತರು ೨,೩ ಮತ್ತು ೪ನೇ ವಿಧಾನಸಭೆಗೆ ಸೋಲೂರು ಹಾಗೂ ನೆಲಮಂಗಲ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಶ್ರೀ ನಿಜಲಿಂಗಪ್ಪ ಮತ್ತು ಶ್ರೀ ವಿರೇಂದ್ರ ಪಾಟೀಲ್ ಅವರ ಸಚಿವ ಸಂಪುಟದಲ್ಲಿ ಉಪ ಸಚಿವರಾಗಿ ಸೇವೆ ಸಲ್ಲಿಸಿರುತ್ತಾರೆ. ಗ್ರಾಮೀಣಾಭಿವೃದ್ಧಿ ಕಾರ್ಯದಲ್ಲಿ ಸಕ್ರಿಯವಾಗಿ ಪಾಲ್ಗೊಂಡಿದ್ದರು. ಹಲವಾರು ಗ್ರಾಮೀಣಾಭಿವೃದ್ಧಿ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿರುತ್ತಾರೆ.

೧೧. ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಟಿ.ಆರ್. ಪರಮೇಶ್ವರಯ್ಯನವರು ದಿನಾಂಕ ೧೦ನೇ ಜುಲೈ ೧೯೯೪ ರಂದು ನಿಧನರಾದರು.

ದಿವಂಗತರು ಎರಡು ಮತ್ತು ಮೂರನೇ ವಿಧಾನಸಭೆಗೆ ತರೀಕೆರೆ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಮುನಿಸಿಪಾಲಿಟಿ ಸದಸ್ಯರಾಗಿ, ಸ್ಥಳೀಯ ಕ್ಷೇತ್ರದ ಅಭಿವೃದ್ಧಿಗಾಗಿ ಶ್ರಮಿಸಿರುತ್ತಾರೆ.

೧೨. ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಎ. ಮುನಿಯಪ್ಪನವರು ದಿನಾಂಕ ೧೫ನೇ ಜುಲೈ ೧೯೯೪ ರಂದು ನಿಧನರಾದರು.

ಶ್ರೀಯುತರು ೧,೨ ಮತ್ತು ನಾಲ್ಕನೆ ವಿಧಾನಸಭೆಗೆ ಬಾಗೆಪಲ್ಲಿ ಕ್ಷೇತ್ರದಿಂದ ಆಯ್ಕೆಯಾಗಿದ್ದರು. ದಲಿತ ಮುಖಂಡರಾಗಿದ್ದ ಶ್ರೀಯುತರು ಹಲವಾರು ಸಂಘ ಸಂಸ್ಥೆಗಳು, ಸಹಕಾರಿ ಮತ್ತು ಸಾಮಾಜಿಕ ಸಂಸ್ಥೆಗಳ ಅಧ್ಯಕ್ಷರುಗಳಾಗಿ, ಚಿಕ್ಕಬಳ್ಳಾಪುರ ತಾಲ್ಲೂಕು ಅಭಿವೃದ್ಧಿ ಮಂಡಳಿಯ ಸದಸ್ಯರಾಗಿ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ತಾಲ್ಲೂಕು ಸಲಹಾ ಸಮಿತಿಯ ಮತ್ತು ಜಿಲ್ಲಾ ಅಭಿವೃದ್ಧಿಯ ಸದಸ್ಯರಾಗಿ ಸೇವೆ ಸಲ್ಲಿಸಿರುತ್ತಾರೆ.

೧೩. ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಬಿ.ಎಂ. ಸಾಣೆಕೊಪ್ಪ ಅವರು ದಿನಾಂಕ ೨೦ನೇ ಜುಲೈ ೧೯೯೪ ರಂದು ನಿಧನರಾದರು.

ದಿವಂಗತರು ನಾಲ್ಕನೆ ವಿಧಾನಸಭೆಗೆ ಕಿತ್ತೂರು ಕ್ಷೇತ್ರದಿಂದ ಆಯ್ಕೆಯಾಗಿದ್ದರು. ಸ್ವಾತಂತ್ರ್ಯ ಹೋರಾಟಗಾರರು, ಕರ್ನಾಟಕ ವಿಕೀಕರಣ ಸಮಿತಿಯ ಪ್ರಮುಖರಾಗಿದ್ದರು. ಕ್ವಿಟ್ ಇಂಡಿಯಾ ಚಳುವಳಿ ಹಾಗೂ ಮತ್ತಿತರ ರಾಷ್ಟ್ರೀಯ ಚಳುವಳಿಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು. ಇಟಗಿ ಗ್ರಾಮ ಪಂಚಾಯಿತಿಯ ಉಪಾಧ್ಯಕ್ಷರಾಗಿ ಮತ್ತು ಇಟಗಿ ಹೈಸ್ಕೂಲ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುತ್ತಾರೆ.

೧೪. ವಿಧಾನಸಭೆಯ ಮಾಜಿ ಸದಸ್ಯರಾದ ಶ್ರೀ ಎಂ. ಆನಂದರಾವ್ ಅವರು ದಿನಾಂಕ ೨೧ನೇ ಆಗಸ್ಟ್ ೧೯೯೪ ರಂದು ನಿಧನರಾದರು.

ಶ್ರೀಯುತರು ೭ನೇ ವಿಧಾನಸಭೆಗೆ ಶಿವಮೊಗ್ಗ ಕ್ಷೇತ್ರದಿಂದ ಚುನಾಯಿತರಾಗಿದ್ದರು. ವಿವಿಧ ಸಹಕಾರಿ ಸಂಘಗಳ ನಿರ್ದೇಶಕರುಗಳಾಗಿ, ಶಿವಮೊಗ್ಗ ಮುನಿಸಿಪಲ್ ಕೌನ್ಸಿಲರ್ ಆಗಿ ಹಾಗೂ ಶಿವಮೊಗ್ಗದ ಸರ್ವೋದಯ ಶಿಕ್ಷಣ ಸೊಸೈಟಿಯ ನಿರ್ದೇಶಕರಾಗಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

೧೫. ರಾಜ್ಯದ ಹಲವಾರು ಜಿಲ್ಲೆಗಳಲ್ಲಿ ಇತ್ತೀಚೆಗೆ ಬಿದ್ದ ಭಾರಿ ಮಳೆಯಿಂದ ಸಾರ್ವಜನಿಕರ ಆಸ್ತಿ ಪಾಸ್ತಿಗಳಿಗೆ ಹಾನಿಯಾಗಿರುವುದಲ್ಲದೆ, ಅನೇಕ ಜನರು ಮೃತಪಟ್ಟಿರುತ್ತಾರೆ.

ಇವರುಗಳೆಲ್ಲರಿಗೂ ನಮ್ಮೆಲ್ಲರ ಸಂತಾಪವನ್ನು ವ್ಯಕ್ತಪಡಿಸುತ್ತೇನೆ.

† ಶ್ರೀ ಎಂ. ವೀರಪ್ಪ ಮೊಯಿಲಿ (ಮುಖ್ಯ ಮಂತ್ರಿಗಳು).—ಮಾನ್ಯ ಅಧ್ಯಕ್ಷರೇ, ಕಳೆದ ಅಧಿವೇಶನ ಮತ್ತು ಈ ಅಧಿವೇಶನದ ಮಧ್ಯೆ ನಮ್ಮ ಅನೇಕ ಪ್ರಮುಖ ನಾಯಕರನ್ನು ನಾವು ಕಳೆದುಕೊಂಡಿದ್ದೇವೆ. ಪಂಜಾಬಿನ ರಾಜ್ಯಪಾಲರಾಗಿದ್ದ ಶ್ರೀ ಸುರೇಂದ್ರನಾಥ ಅವರು ಬಹಳ ದಕ್ಷತೆಯಿಂದ ಅಲ್ಲಿ ಶಾಂತಿ ಮತ್ತು ನೆಮ್ಮದಿ ಪುನಃ ಸ್ಥಾಪನೆಯಾಗುವ ರೀತಿಯಲ್ಲಿ ಬಹಳ ವಿಶೇಷವಾದ ಕಾರ್ಯಕ್ರಮವನ್ನು ನಿರ್ವಹಿಸಿದ್ದರು. ಅವರನ್ನು ನಾವಿಂದು ಕಳೆದುಕೊಂಡಿದ್ದೇವೆ. ಇನ್ನು ನಮ್ಮ ಸಂಪುಟದಲ್ಲಿ ಸಚಿವರಾಗಿದ್ದಂತಹ ಶ್ರೀ ಟಿ. ಎಂ. ಮಂಜುನಾಥ್ ಅವರನ್ನು ನಾವಿಂದು ಕಳೆದುಕೊಂಡಿದ್ದೇವೆ. ಅವರು ಸಾರ್ವಜನಿಕ ಜೀವನದಲ್ಲಿ ತನ್ನದೇ ಆದಂತಹ ವ್ಯಕ್ತಿತ್ವದ ಛಾಪನ್ನು ಒತ್ತಿದವರು ಮತ್ತು ಶಿಪಟೂರು ತಾಲ್ಲೂಕು ಅಭಿವೃದ್ಧಿ ಮಂಡಲಿಯ ಅಧ್ಯಕ್ಷರಾಗಿ ಬಹಳ ವರ್ಷಗಳ ಕಾಲ ಕೆಲಸ ಮಾಡಿದವರು. ಅನೇಕ ಬಾರಿ ವಿಧಾನ ಸಭೆಗೆ ಆಯ್ಕೆಯಾಗಿ ಶಾಸನ ಸಭೆಯ ಪ್ರತಿನಿಧಿಗಳಾಗಿ ಸಚಿವರಾಗಿ ಬಹಳ ಯಶಸ್ವಿಯಾಗಿ ಮತ್ತು ದಕ್ಷತೆ, ಪ್ರಾಮಾಣಿಕತೆಯಿಂದ ಕೆಲಸ ಮಾಡಿದಂತಹ ಶ್ರೀ ಮಂಜುನಾಥ್ ಅವರ ನಿಧನದಿಂದ ವೈಯಕ್ತಿಕವಾಗಿ ನಮ್ಮ ಪಕ್ಷಕ್ಕೆ ಮತ್ತು ಸರಕಾರಕ್ಕೆ ಹಾಗೂ ರಾಜ್ಯಕ್ಕೆ ವಿಶೇಷವಾದಂತಹ ನಷ್ಟವಾಗಿದೆ. ಕೊಳ್ಳೇಗಾಲದ ಶಾಸಕರಾದಂತಹ ಶ್ರೀ ಸಿದ್ದಮಾದಯ್ಯ ನವರೂ ಕೂಡ ೫ ಮತ್ತು ೬ನೇ ವಿಧಾನ ಸಭೆಯಲ್ಲಿ ಆಯ್ಕೆಗೊಂಡಿದ್ದರು ಅವರು ಬಹಳ ಸಜ್ಜನರು ಪ್ರಾಮಾಣಿಕತೆಯ ಒಬ್ಬ ಸಮಾಜದ ಕಾರ್ಯಕರ್ತರು, ಯಾವಾಗಲೂ ದಲಿತರ ಬಗ್ಗೆ ವಿಶೇಷವಾದಂತಹ ಆಸಕ್ತಿ ವಹಿಸಿ ಕೆಲಸ ಮಾಡಿಕೊಂಡು ಬಂದಂತಹವರು. ಅವರನ್ನು ನಾವಿಂದು ಕಳೆದುಕೊಂಡಿದ್ದೇವೆ. ಶ್ರೀ ಎಸ್. ಎಫ್. ಪಾಟೀಲ್ ಅವರು ಹಿರಿಯರು ಮತ್ತು ಸರ್ಕಾರಿ ಚಳುವಳಿಯ ಅಂದೋಳನದಲ್ಲಿ ಬಹಳ ಸಕ್ರಿಯವಾಗಿ ಕೆಲಸ ಮಾಡಿಕೊಂಡು ಬಂದಂಥವರು. ಭಾರತೀಯ ಕೃಷಿ ಮಹಾ ಮಂಡಳಿಯಲ್ಲಿ ಸಕ್ರಿಯವಾಗಿ ಕೆಲಸ ಮಾಡಿಕೊಂಡು ಬಂದಂತಹ ಶ್ರೀ ಎಸ್. ಎಫ್ ಪಾಟೀಲರು ಪ್ರಾಮಾಣಿಕವಾಗಿ ಸಮಾಜದ ಕಾರ್ಯಕರ್ತರಾಗಿದ್ದರು, ಬಹಳ ಸಜ್ಜನರಾಗಿದ್ದರು, ಸುಸಂಸ್ಕೃತರಾಗಿದ್ದರು. ವಿಶೇಷವಾದ ಉನ್ನತವಾದ ವ್ಯಕ್ತಿತ್ವವಿಟ್ಟುಕೊಂಡು ಬಂದವರು ಸಾಮಾಜಿಕ ಕಾರ್ಯಕರ್ತರಲ್ಲಿ ಒಳ್ಳೆಯ ಹೆಸರನ್ನು ಸಂಪಾದನೆ ಮಾಡಿದಂತಹ ಇವರನ್ನು ಇಂದು ಕಳೆದುಕೊಂಡಿದ್ದೇವೆ, ಇನ್ನೂ ಅನೇಕ ನಾಯಕರು ತಮ್ಮ ತಮ್ಮ ಕ್ಷೇತ್ರದಲ್ಲಿ ಉತ್ತಮವಾದ ಸೇವೆಯನ್ನು ಮಾಡಿಕೊಂಡು ಬಂದಂತಹವರು ಇದರಲ್ಲಿ ಇದ್ದಾರೆ. ಶ್ರೀ ಬಸವರಾಜ್, ಶ್ರೀ ನಂಜೇಗೌಡ, ಶ್ರೀ ಮಾದಯ್ಯ, ಶ್ರೀ ಎ. ಚಿನ್ನಪ್ಪ, ಇವರುಗಳ ನಿಧನದಿಂದ ನಮಗೆ ತುಂಬಾ ನಷ್ಟವುಂಟಾಗಿದೆ. ಶಾಸಕರಾದ ಶ್ರೀ ಪಿ. ರಾಮದೇವ್ ಅವರು ನಮ್ಮನ್ನು ಅಗಲಿದ್ದಾರೆ. ಬೆಂಗಳೂರು ನಗರದಲ್ಲಿ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳಲ್ಲಿ ತಮ್ಮದೇ ಆದಂಥಹ ವಿಶಿಷ್ಟವಾದ ಸ್ಥಾನವನ್ನು ಪಡೆದಂತಹವರು. ಕಾರ್ಮಿಕ ಕ್ಷೇತ್ರದಲ್ಲಿ ವಿಶೇಷವಾಗಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಶ್ರೀ ಆಲೂರು ಹನುಮಂತಪ್ಪನವರು, ಶ್ರೀ ಪರಮೇಶ್ವರಯ್ಯನವರು ಶ್ರೀ ಸಾಣಿಕೊಪ್ಪ, ಶ್ರೀ ಎ. ಮುನಿಯಪ್ಪನವರು ನಮ್ಮನ್ನು ಅಗಲಿದ್ದಾರೆ. ಇವರು ಶಾಸಕರು ಮಾತ್ರವಲ್ಲ, ಒಂದು ರೀತಿಯಲ್ಲಿ ಅಪರೂಪವಾದ ಪತ್ರಿಕಾ ಸಮುದಾಯದಿಂದ ಶಾಸನ ಸಭೆಗೆ ಪ್ರವೇಶ ಮಾಡಿದಂತಹ ಒಬ್ಬ ವಿಶಿಷ್ಟಪೂರ್ಣವಾದಂತಹ ವ್ಯಕ್ತಿ ಶ್ರೀ ಮುನಿಯಪ್ಪನವರು. ಶ್ರೀ ಎಂ. ಆನಂದರಾವ್, ಅವರು ನಮ್ಮನ್ನು ಶಿವಮೊಗ್ಗದಲ್ಲಿ ಮರಣ ಹೊಂದಿದರು. ಅವರು ಒಳ್ಳೆಯ ಕಾರ್ಯಕರ್ತರಾಗಿದ್ದರು. ಯಾವಾಗಲೂ ಸಾರ್ವಜನಿಕ ಜೀವನದಲ್ಲಿ ವಿಶೇಷವಾದ ಆಸಕ್ತಿಯಿಂದ ಪ್ರಾಮಾಣಿಕತೆಯಿಂದ ಕೆಲಸ ಮಾಡಿದಂತಹವರು ಇವರು. ಇವರುಗಳ ಸೇವೆ ಅನೇಕ ಮತ್ತು ಬಹಳ ಉತ್ತಮವಾದ ಸೇವೆಯನ್ನು ನಮ್ಮ ದೇಶಕ್ಕೆ, ನಾಡಿಗೆ ಸಲ್ಲಿಸಿದ್ದಾರೆ. ಇನ್ನೂ ಕೂಡ ಇವರ ಸೇವೆಯನ್ನು ನಮ್ಮ ನಾಡಿಗೆ ದೇಶಕ್ಕೆ ಕೊಡಬೇಕಾಗಿತ್ತು ಆ ಸೇವೆಯಿಂದ ನಮ್ಮ ನಾಡು ರಾಷ್ಟ್ರ, ವಿಶೇಷವಾದ ಪ್ರಯೋಜನ ಪಡೆಯುತ್ತಿತ್ತು. ಇದರ ಬಗ್ಗೆ ನಾನು ವಿಷಾದವನ್ನು ಸಮರ್ಪಿಸಿ ತಾವು ಶ್ರದ್ಧಾಂಜಲಿ ನಿರ್ಣಯವನ್ನು ಏನು ಮಂಡಿಸಿದ್ದೀರಿ, ಅದಕ್ಕೆ ಸಂಪೂರ್ಣವಾಗಿ ನನ್ನ ಅನುಮತಿಯನ್ನು ಹೆಚ್ಚಾಗಿ ಅನುಮೋದನೆಯನ್ನು ಕೂಡ ವ್ಯಕ್ತಪಡಿಸಿ ಅವರ ಆತ್ಮಕ್ಕೆ ಚಿರಶಾಂತಿ ಸಿಗಲಿ ಅವರ ಸಂಬಂಧಿಕರಿಗೆ ಈ ದುಃಖವನ್ನು ಭರಿಸತಕ್ಕಂತಹ ಶಕ್ತಿ ಸಿಗಲಿ ಎಂದು ಹಾರೈಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಆರ್. ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು).—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಹಲವಾರು ಜನ ಹಾಲಿ ಶಾಸಕರು ಮತ್ತು ಮಾಜಿ ಶಾಸಕರುಗಳನ್ನು ನಾವು ಕಳೆದುಕೊಂಡಿದ್ದೇವೆ; ನಮ್ಮ ಹಿಮಾಚಲ ಮತ್ತು ಪಂಜಾಬ್‌ನ ರಾಜ್ಯಪಾಲ

---

† ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣಗಳನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ರಾದಂಥ ಸುರೇಂದ್ರನಾಥ್‌ರವರು ಆಕಸ್ಮಿಕವಾಗಿ ಏರ್‌ಕ್ರಾಷ್‌ನಲ್ಲಿ ಅವರ ಇಡೀ ಕುಟುಂಬದ ಸದಸ್ಯರೆಲ್ಲರೂ ತೀರಿಕೊಂಡರು, ಇದು ನಿಜವಾಗಿಯೂ ನಮಗೆ ಬಹಳ ಧಕ್ಕೆಯಾಯಿತು. ಏಕೆಂದರೆ ಅವರು ಮತ್ತು ಪಂಜಾಬ್‌ನ ಪೋಲೀಸ್ ಅಧಿಕಾರಿ ಗಿಲ್ ಅವರು ಪಂಜಾಬ್ ರಾಜ್ಯದಲ್ಲಿ ಶಾಂತಿ ಸಂಧಾನ ಮಾಡುವುದಕ್ಕೆ ಏನು ಪ್ರಯತ್ನ ಮಾಡಿದ್ದಾರೆ, ಅದನ್ನು ನಾವೆಲ್ಲರೂ ಸ್ಮರಿಸಬೇಕಾಗಿ ದೆ ಮತ್ತು ಮೆಚ್ಚಬೇಕಾಗಿದೆ. ಅದೇ ಪ್ರಕಾರ ಶ್ರೀಯುತ ಮಂಜುನಾಥ್‌ರವರು ಮಾನ್ಯ ಸಚಿವರು, ಬಹಳ ಸಜ್ಜನರು. ಅವರುಗಳ ನಿಧನದಿಂದ ಕಾಂಗ್ರೆಸ್ ಪಕ್ಷಕ್ಕೆ ಹಾನಿಯಾಗಿರಬಹುದು, ನಾವು ಕೂಡ ಒಂದು ಒಳ್ಳೆಯ ಸಜ್ಜನ ಸ್ನೇಹಿತರನ್ನು ಕಳೆದುಕೊಂಡಿದ್ದೇವೆ. ಅದೇ ಪ್ರಕಾರ ನಮ್ಮ ಎಸ್. ಎಫ್. ಪಾಟೀಲ್ ಶಾಸಕರು, ಅವರು ಸಹ ಸಹಕಾರಿಗಳು, ನರಗುಂದ್ ನಗರಸಭೆಯ ಅಧ್ಯಕ್ಷರಿದ್ದರು, ಬಹಳ ಹಿರಿಯರು. ಅವರ ನಿಧನದಿಂದ ನಮಗೆ ಸಾಕಷ್ಟು ನೋವಾಗಿದೆ. ಅದೇ ಪ್ರಕಾರ ನಮ್ಮ ಕೊಳ್ಳೇಗಾಲದ ಶಾಸಕರು, ಸಿದ್ಧಮಾದಯ್ಯನವರು ೫ನೇ, ೬ನೇ ಮತ್ತು ೯ನೇ ವಿಧಾನಸಭೆಯ ಸದಸ್ಯರಿದ್ದರು, ಬಹಳ ಪ್ರಮಾಣಿಕರು. ಅವರುಗಳನ್ನೂ ಸಹಾ ಆಕಸ್ಮಿಕವಾಗಿ ನಾವು ಕಳೆದುಕೊಂಡಿದ್ದೇವೆ. ಮತ್ತು ಹಲವಾರು ಮಾಜಿ ಶಾಸಕರು, ಶ್ರೀ ಬಸವರಾಜ್‌ರವರು, ನಂಜೇಗೌಡರು, ಮಾದಯ್ಯನವರು. ಚಿನ್ನಪ್ಪನವರು, ರಾಮದೇವ್‌ರವರು, ಆಲೂರು ಹನುಮಂತಪ್ಪನವರು, ಟಿ. ಆರ್. ಪರಮೇಶ್ವರಯ್ಯನವರು, ಎ. ಮುನಿಯಪ್ಪನವರು, ಶ್ರೀ ಬಿ. ಎಂ. ಸಾಣಿಕೊಪ್ಪರವರು ಮತ್ತು ಆನಂದರಾವ್ ಅವರನ್ನು ನಾವು ಕಳೆದುಕೊಂಡಿದ್ದೇವೆ. ನಿಜವಾಗಿಯೂ ನಾವೆಲ್ಲರೂ ಸಾಕಷ್ಟು ಬಡವರಾಗಿದ್ದೇವೆ. ಅವರು ರಾಜ್ಯದ ಬೇರೆ ಬೇರೆ ಸ್ಥಾನದಲ್ಲಿದ್ದಾಗ ಅವರು ಒಳ್ಳೆಯ ಸೇವೆಯನ್ನು ಮಾಡಿದ್ದಾರೆ. ಅದನ್ನು ನಾವು ಸ್ಮರಿಸಬೇಕು ಅದೇ ಪ್ರಕಾರ ಅತಿವೃಷ್ಟಿಯಿಂದಲೂ ಸಹಾ ಸಾಕಷ್ಟು ಜನ ತಮ್ಮ ಜೀವವನ್ನು ಕಳೆದುಕೊಂಡಿದ್ದಾರೆ. ಅವರನ್ನೂ ಸಹ ನಾವು ಸ್ಮರಿಸಬೇಕಾಗಿದೆ. ಇಷ್ಟು ಹೇಳಿ ಇವರೆಲ್ಲರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ತಾವು ಏನು ಒಂದು ನಿರ್ಣಯವನ್ನು ಮಂಡಿಸಿದ್ದೀರಿ, ಅದನ್ನು ಅನುಮೋದಿಸುತ್ತಾ, ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಟಿ.ಎಸ್. ಯಡಿಯೂರಪ್ಪ(ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಈ ಮನೆಯ ಇಬ್ಬರು ಹಾಲಿ ಸದಸ್ಯರು ಮತ್ತೆ ಒಬ್ಬರು ಸಚಿವರು ಇವತ್ತು ದೈವಾಧೀನರಾಗಿದ್ದಾರೆ. ಅವರೆಲ್ಲದೆ ಈ ಮನೆಯಲ್ಲಿ ಹಿಂದೆ ಶಾಸಕರಾಗಿ ಕೆಲಸ ಮಾಡಿದಂಥ ಹತ್ತು ಜನ ಹಿರಿಯ ಮಾಜಿ ಶಾಸಕರು ಇವತ್ತು ನಮ್ಮನ್ನು ಅಗಲಿದ್ದಾರೆ. ಮತ್ತೆ ಪಂಜಾಬ್ ಮತ್ತು ಹಿಮಾಚಲಪ್ರದೇಶದ ಮಾನ್ಯ ರಾಜ್ಯಪಾಲರಾಗಿದ್ದಂಥ ಸುರೇಂದ್ರನಾಥರವರು ಮರಣಕ್ಕೆ ತುತ್ತಾಗಿರುವ ಸಂದರ್ಭದಲ್ಲಿ ಈ ಸಂತಾಪ ಸೂಚನೆಯನ್ನು ತಾವು ಇಟ್ಟಿದ್ದೀರಿ. ಟಿ. ಎಂ. ಮಂಜುನಾಥ್‌ರವರು ನಮ್ಮ ಮಧ್ಯೆ ಇಲ್ಲ ಎಂದು ಹೇಳಿದರೆ ಅದನ್ನು ಕಲ್ಪನೆ ಮಾಡಿಕೊಳ್ಳುವುದಕ್ಕೂ ಸಾಧ್ಯವಿಲ್ಲ. ತುಂಬಾ ಹಠ ಇತ್ತು. ಏನಾದರೂ ಸಾಧನೆ ಮಾಡಬೇಕು. ಎನ್ನುವ ಕಳಕಳಿ ಅಪೇಕ್ಷೆ ಇದ್ದಂಥ ಒಬ್ಬ ವ್ಯಕ್ತಿಯನ್ನು ನಾವು ಇವತ್ತು ಕಳೆದುಕೊಂಡಿದ್ದೇವೆ ಅದೇ ರೀತಿ ಇಲ್ಲಿ ನಮ್ಮ ಮಧ್ಯೆ ಇದ್ದು ಈ ನಾಡಿನ ಜನರ ಏಳಿಗೆಗೋಸ್ಕರ ಮಾರ್ಗದರ್ಶನ ಮಾಡಿದಂಥ ಸನ್ಮಾನ್ಯ ಸಿದ್ಧಮಾದಯ್ಯನವರು, ಎಸ್. ಎಫ್. ಪಾಟೀಲ್ ಇವತ್ತು ನಮ್ಮ ಜೊತೆಗೆ ಇಲ್ಲದಂಥ ಸಂದರ್ಭದಲ್ಲಿ ನಾವು ಇಲ್ಲಿ ಸೇರಿದ್ದೇವೆ. ಹಿರಿಯರಾಗಿ ಬೆಂಗಳೂರಿನ ಅಭಿವೃದ್ಧಿಗೋಸ್ಕರ ತುಂಬಾ ಕಳಕಳಿ ಇದ್ದಂಥ ಶ್ರೀ. ರಾಮದೇವ್ ಅವರು ಇವತ್ತು ನಮ್ಮ ಜೊತೆಯಲ್ಲಿ ಇಲ್ಲ. ನಮ್ಮ ಪಕ್ಷದವರಾಗಿ ಇಲ್ಲೇ ಶಾಸಕರಾಗಿ ಕೆಲಸಮಾಡಿದಂಥ ಎಂ. ಆನಂದರಾವ್‌ರವರು ಮೊನ್ನೆತಾನೆ ದೈವಾಧೀನರಾದಂಥ ಸಂದರ್ಭದಲ್ಲಿ ನಾವೇನು ಇಲ್ಲಿ ಸೇರಿದ್ದೇವೆ, ಈ ಒಂದು ಸಂದರ್ಭದಲ್ಲಿ ಮಾನ್ಯ ಮುಖ್ಯಮಂತ್ರಿಗಳು ಒಪ್ಪಿಕೊಳ್ಳುವುದಾದರೆ ಇದರ ಜೊತೆಗೆ ಆಗಸ್ಟ್ ೧೫ನೇ ತಾರೀಖು ಸ್ವಾತಂತ್ರ್ಯೋತ್ಸವ ದಿನದಂದು ಹುಬ್ಬಳ್ಳಿಯಲ್ಲಿ ಏನು ಐದು ಜನರು ಗೋಲಿಬಾರ್‌ನಿಂದ ಮೃತರಾದರು, ಸನ್ಮಾನ್ಯ ಮಹಾದೇವ್ ದೊಂಗಡಿ, ಮಂಜುನಾಥ್ ಚಾದರ್, ಶ್ರೀನಿವಾಸ್ ಕಟ್ಟಿ, ಸಾಯಿನಾಥ್ ದೊಂಗಡಿ, ಪ್ರಸನ್ನ ರಾನಡೆ ಈ ಐದು ಜನರು ಮತ್ತೆ ನಂತರ ಗೋಲಿಬಾರ್‌ನಿಂದ ಮೃತರಾದಂಥವರು, ಇದು ವಿಶೇಷವಾದ ಸಂದರ್ಭ. ಆದ್ದರಿಂದ ಈ ಸಂತಾಪ ಸೂಚನೆಯಲ್ಲಿ ಇವರ ಹೆಸರನ್ನು ಸೇರಿಸಬೇಕು. ಅವರ ಆತ್ಮಕ್ಕೆ ಶಾಂತಿಯನ್ನು ಕೋರುವುದಕ್ಕೆ ಎಂದು ಹೇಳುತ್ತೇನೆ. ಸನ್ಮಾನ್ಯ ಅಧ್ಯಕ್ಷರು ಅವರ ಹೆಸರುಗಳನ್ನು ಸೇರಿಸಬೇಕು ಎಂದು ವಿನಂತಿ ಮಾಡುತ್ತೇನೆ. ಇವತ್ತು ತಾವು ಏನು ಈ ಒಂದು ಸಂತಾಪ ಸೂಚನೆಯನ್ನು ಇಟ್ಟಿದ್ದೀರಿ. ಇದಕ್ಕೆ ನನ್ನ ಅನುಮೋದನೆಯನ್ನು ಹೇಳುತ್ತೇನೆ. ಮಡಿದವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ ಎಂದು ಭಗವಂತನಲ್ಲಿ ಕೋರುತ್ತಾ ಈ ದಿಸೆಯಲ್ಲಿ ನಮ್ಮ ಪಕ್ಷದ ವತಿಯಿಂದ ಶಾಂತಿಯನ್ನು ಕೋರುತ್ತಾ, ತಮಗೆ ವಂದನೆಯನ್ನು ಸಲ್ಲಿಸುತ್ತೇನೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜ ನಗರ).—ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿದ ಸಂತಾಪ ಸೂಚನಾ ನಿರ್ಣಯವನ್ನು ನಾನು ಅನುಮೋದಿಸುತ್ತೇನೆ. ಸಚಿವರಾಗಿದ್ದಂತಹ ಮಾನ್ಯ ಮಂಜುನಾಥ ಅವರು ಪಂಜಾಬಿನ ರಾಜ್ಯಪಾಲರಾಗಿದ್ದಂತಹ ಸುರೇಂದ್ರನಾಥ್ ಅವರು ಸಿದ್ದಮಾದಯ್ಯನವರು ನರಗುಂದ ಶಾಸಕರಾದ ಎಸ್. ಎಫ್ ಪಾಟೀಲ್ ಅವರು. ಎ. ಚಿನ್ನಪ್ಪನವರು ಪಿ. ರಾಮದೇವ್ ಅವರು. ಅಲೂರು ಹನುಮಂತಪ್ಪನವರು, ಟಿ. ಆರ್. ಪರಮೇಶ್ವರಯ್ಯನವರು ಎ. ಮುನಿಯಪ್ಪನವರು. ಬಿ. ಎ. ಸಾಣೇಕೊಪ್ಪ ಅವರು ಇಂತಹ ಅನೇಕ ಮಹನೀಯರುಗಳನ್ನು ನಾವು ಕಳೆದುಕೊಂಡು ಈ ರಾಜ್ಯ ಬಡವಾಗಿದೆ ಎಂದು ನಾನಾದರೂ ಅಂದುಕೊಂಡಿದ್ದೇನೆ. ಒಂದು ದುರ್ದೈವದ ಸಂಗತಿ ಎಂದರೆ ಪ್ರತಿ ಸಾರಿ ಸದನ ಸೇರಿದ ಮೊದಲನೇ ದಿವಸ ಸಂತಾಪ ಸೂಚನೆ ಮಾಡತಕ್ಕದ್ದು ಒಂದು ದುರ್ದೈವ. ಈ ರೀತಿ ಪರಿಸ್ಥಿತಿ ಆಷ್ಟೇ ಹೊರತು ಇದಕ್ಕೆ ಯಾರೂ ಹೊಣೆ ಎಂದು ನಾವು ಅಂದುಕೊಂಡಿಲ್ಲ. ಪ್ರತಿ ಸಾರಿ ಇದು ಸಂಭವಿಸುತ್ತದೆ. ಇದನ್ನು ತಪ್ಪಿಸುವುದಕ್ಕೆ ಸಾಧ್ಯ ಇಲ್ಲ. ಇದು ಭಗವಂತನ ನಿಯಮ ಎಂದು ನಾವು ಅಂದು ಕೊಂಡಿದ್ದೇವೆ. ಆದರೂ ಈ ಸಂದರ್ಭದಲ್ಲಿ ಸತ್ತಂತಹ ಅನೇಕ ಮಹನೀಯರು ಆದರಲ್ಲೂ ನಮ್ಮ ಮಾನ್ಯ ವಿರೋಧ ಪಕ್ಷದ ನಾಯಕರು ಹೇಳಿದ ರೀತಿಯಲ್ಲಿ ಸುರೇಂದ್ರನಾಥ್ ಅವರು ಪಂಜಾಬಿನ ರಾಜ್ಯಪಾಲರಾಗಿದ್ದರು. ಇಡೀ ದೇಶದಲ್ಲಿ ಒಂದು ಅಲ್ಲೋಲಕಲ್ಲೋಲ ಪರಿಸ್ಥಿತಿಯಲ್ಲಿ ಅವರು ಪಂಜಾಬಿನ ರಾಜ್ಯಪಾಲರಾಗಿ ಶಾಂತಿಯನ್ನು ಸ್ಥಾಪಿಸಲಿಕ್ಕೆ ಅಪಾರವಾದ ಕೆಲಸವನ್ನು ಮಾಡಿದ್ದಾರೆ. ಇದನ್ನು ನಾವು ನೆನಪಿಸಿಕೊಳ್ಳಬೇಕಾಗಿದೆ. ಶ್ರೀಮಾನ್ ಮಂಜುನಾಥ್ ಅವರು ಬಹಳ ಕಳಕಳಿಯಿಂದ ಎಲ್ಲರ ಜೊತೆಗೆ ನಗುನಗುತ್ತಾ ಇದ್ದಂತಹ ವ್ಯಕ್ತಿ. ಯಾವುದೇ ಸಂದರ್ಭದಲ್ಲಿ ಗಲಾಟೆ ಗದ್ದಲ ಆದಾಗ ಎರಡು ಕಡೆ ಬಂದು ಕುಳಿತು ಮಾತನಾಡಿ ವಿರೋಧ ಪಕ್ಷದವರು ನೀವು ಬರಬೇಕು ನೀವು ಬರಬೇಕು ಎಂದು ಮಾತು ಹೇಳಿ ಒಂದು ರೀತಿ ರಾಜಿಯನ್ನು ಮಾಡತಕ್ಕ ವ್ಯಕ್ತಿತ್ವ ಉಳ್ಳಂತಹ ವ್ಯಕ್ತಿ ಮಂಜುನಾಥ್ ಅವರು. ಇಂತಹ ಅನೇಕ ಮಹನೀಯರನ್ನು ಕಳೆದುಕೊಂಡು ಈ ಸಭೆ ಮತ್ತು ರಾಜ್ಯ ಬಡವಾಗಿದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದೇ ಸಂದರ್ಭದಲ್ಲಿ ಮತ್ತೊಂದು ವಿಚಾರ ಹೇಳಿದ್ದೀರಿ. ಮಳೆಯಿಂದ ಹಾನಿ ಆದಂತಹ, ಅದರಿಂದ ಮೃತಪಟ್ಟಂತಹವರ ಬಗ್ಗೆ ಸಹ ಹೇಳಿದ್ದೀರಿ. ಅದೇ ರೀತಿ ಇತ್ತೀಚೆಗೆ ಗೋಲಿಬಾರ್‌ನಿಂದ ಯಾರ್ಯಾರು ಸತ್ತಿದ್ದಾರೆ ಈ ಸದನದಲ್ಲಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರತಕ್ಕ ಒಂದು ಗೊತ್ತುವಳಿಯನ್ನು ತಾವು ಸೇರಿಸಬೇಕೆಂದು ಕಳಕಳಿಯಿಂದ ಮನವಿ ಮಾಡಿ ಎಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಡಿ.ಬಿ. ಚಂದ್ರೇಗೌಡ(ತೀರ್ಥಹಳ್ಳಿ).—ಮಾನ್ಯ ಸಭಾಧ್ಯಕ್ಷರೇ, ತಾವು ಸಭಾನಾಯಕರು ಮಾನ್ಯ ವಿರೋಧ ಪಕ್ಷದ ನಾಯಕರು ಅಭಿವ್ಯಕ್ತ ಮಾಡಿದಂತಹ ಅಭಿಪ್ರಾಯಕ್ಕೆ ನನ್ನ ಸಹಮತವನ್ನು ಹೇಳುತಾ, ಶ್ರೀಮಾನ್ ಮಂಜುನಾಥ್ ಅವರ ಬಗ್ಗೆ ಒಂದು ಮಾತನ್ನು ಹೇಳಬೇಕು, ಎಂದು ನನ್ನ ಇಚ್ಛೆ. ಮಂಜುನಾಥ್ ಅವರನ್ನು ಸಾಧಾರಣವಾಗಿ ಎಲ್ಲರೂ ಮಂಜಣ್ಣ ಎಂದು ಕರೆಯುತ್ತಿದ್ದರು. ಎಲ್ಲರಿಗೂ ಪ್ರಶ್ನಾತೀತವಾಗಿ ಅವರು ಮಂಜಣ್ಣ ಆಗಿದ್ದರು. ನಾನು ಎರಡನೆ ಬಾರಿ ಲೋಕಸಭಾ ಚುನಾವಣೆಯ ಅಭ್ಯರ್ಥಿಯಾಗಿ ತಾವು ನಿರ್ದೇಶನ ಪತ್ರ ಕೊಟ್ಟು ಬೆಂಗಳೂರಿಗೆ ಬಂದೆ. ರಾತ್ರಿ ವಾಪಸ್ ಹೋಗುವುದು ಇತ್ತು. ಶ್ರೀಮಾನ್ ರಂಗನಾಥ್ ಅವರು ಇಷ್ಟು ಹೊತ್ತಿನಲ್ಲಿ ಏಕೆ ಹೋಗುತ್ತೀರಿ ಎಂದು ನನಗೆ ಆಗ್ರಹ ಮಾಡಿದರು. ಆದರೂ ಅವರ ಮಾತನ್ನು ಮೀರಿ ಹೊರಟೆವು. ತಿಪಟೂರಿನಲ್ಲಿ ಒಂದು ದೊಡ್ಡ ಅಪಘಾತಕ್ಕೆ ಒಳಗಾದೆವು ಆ ದಿವಸ. ನನಗೆ ಗಡ್ಡ ಬಂದಿದ್ದೇ ಆ ಕಾರಣಕ್ಕಾಗಿ. ಅವತ್ತು ರಾತ್ರಿ ಮಂಜುನಾಥ್ ಅವರು ೧೨ ಗಂಟೆಗೆ ಎಲ್ಲಾ ವ್ಯವಸ್ಥೆಯನ್ನು ಮಾಡಿದರು. ಅವರು ಉಪಚಾರ ವ್ಯವಸ್ಥೆಯನ್ನು ಮಾಡದೇ ಇದ್ದರೆ ನಾನಂತೂ ಬದುಕಿ ಉಳಿಯುವುದು ಕಷ್ಟ ಆಗಿತ್ತು. ಇಂತಹ ಒಂದು ಕಷ್ಟದ ಪರಿಸ್ಥಿತಿಯಲ್ಲಿ ಮಂಜುನಾಥ್ ಅವರು ಶುಶ್ರೂಷೆ ಮಾಡಿ ನಮ್ಮ ಜೊತೆಗೆ ಬೆಳಿಗ್ಗೆ ತನಕ ಇದ್ದದ್ದು ವಿಶೇಷವಾದ ಸ್ನೇಹಕ್ಕೆ ಕಾರಣ ಆಯಿತು. ಆ ಸ್ನೇಹ ಹಾಗೆಯೇ ಇದ್ದು ನಿಕಟವಾದಂತಹ ಸಂಬಂಧ, ಸಂಪರ್ಕ ಇಟ್ಟುಕೊಂಡಿದ್ದವರ ಅಕಾಲಿಕ ಮರಣ ಆಯಿತು. ಅವರ ಹಿಂದಿನ ದಿವಸ ಕೆಳಗೆ. ತೀರತುರ್ತಾದ ಅನಿವಾರ್ಯವಾದ ಅಪರೇಷನ್ನಿನ ಅಗತ್ಯ ಏನಿದೆ ? ಎಂದಿದ್ದಕ್ಕೆ ನಾನು ಎಕ್ಸ್ ರೇ ಪೋರ್ಟಬಲ್ ಆಗಿ ಆಪರೇಷನ್ ಮಾಡಿಸಿಕೊಂಡು ಮುಂದಿನ ಚುನಾವಣೆಗೆ ಸಿದ್ಧನಾಗುತ್ತೇನೆ ಎಂದರು. ತದನಂತರ, ಮದ್ರಾಸಿಗೆ ಹೋದವರು ವಾಪಸ್ ಬರಲಿಲ್ಲ. ಅವರ ಮರಣದಿಂದ ನೊಂದವರಲ್ಲಿ ನಾನೂ ಕೂಡ ಒಬ್ಬನಾಗಿದ್ದೇನೆ. ಹಾಗೆಯೇ ಮೃತರಾದವರಲ್ಲಿ

† ಈ ಚಿಹ್ನೆ ಮಾನ್ಯ ಸದಸ್ಯರು ಟೀಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ನಮ್ಮ ಆತ್ಮೀಯ ಸದಸ್ಯ ಸ್ನೇಹಿತರಾದ ಶ್ರೀ ಸಿದ್ದಮಾದಯ್ಯನವರನ್ನು ನಾನು ಕಳೆದ ೨೫ ವರ್ಷಗಳಿಂದ ಬಲ್ಲೆ. ಇವರಿಗೆ ಮತ್ತು ಉಳಿದಿರತಕ್ಕ ಇತರ ಮೃತರಾದವರ ಬಗ್ಗೆ ತಾವು ಅಭಿವ್ಯಕ್ತ ಮಾಡಿದ ಅಭಿಪ್ರಾಯಕ್ಕೆ ನಾನೂ ಧ್ವನಿಗೂಡಿಸಿ ಅವರೆಲ್ಲರ ಆತ್ಮಕ್ಕೆ ಚಿರಶಾಂತಿಯನ್ನು ದಯಪಾಲಿಸಿಯನಾದ ಭಗವಂತನು ಕರುಣಿಸಲಿ ಎಂದು ತಮ್ಮ ಸಂತಾಪಸೂಚಕ ಸಂದೇಶದಲ್ಲಿ ನಮ್ಮ ಈ ಸಂದೇಶವನ್ನೂ ಸಹ ಸೇರಿಸಬೇಕೆಂದು ತಮ್ಮಲ್ಲಿ ಪ್ರಾರ್ಥಿಸಿಕೊಂಡು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಸಿ. ಬೈರೇಗೌಡ (ವೇಮಗಲ್).—ಸನ್ಮಾನ್ಯ ಅಧ್ಯಕ್ಷರೆ, ಈ ಸದನದಲ್ಲಿ ಸಕ್ರಿಯವಾಗಿ ಕಾರ್ಯ ನಿರ್ವಹಿಸಿದಂಥ ಕೆಲವು ಮಾನ್ಯ ಸದಸ್ಯರುಗಳು ನಮ್ಮ ನಡುವೆ ಜೀವನದಲ್ಲಿ ಅತ್ಯಂತ ಮಹತ್ವದ ಪಾತ್ರವಹಿಸಿ, ಅಚ್ಚಳಿಯದಂಥ ಮುದ್ರೆಯೊತ್ತಿರತಕ್ಕ ಮಹನೀಯರು ನಿಧನಕ್ಕೆ ಶೋಕವನ್ನು ಸೂಚಿಸತಕ್ಕ ತಮ್ಮ ನಿರ್ಣಯವೇನಿದೆ ಅದಕ್ಕೆ ನಾನು ಬೆಂಬಲ ವ್ಯಕ್ತಪಡಿಸ್ತಾ ಮೊದಲನೆಯದಾಗಿ ಮಾನ್ಯ ಸದಸ್ಯರಾದ ಡಿ.ಬಿ. ಚಂದ್ರೇಗೌಡರು ಹೇಳಿದಂತೆ ದಿವಂಗತ ಶ್ರೀ ಟಿ.ಎಂ. ಮಂಜುನಾಥ್‌ರವರು ಮತ್ತು ನಾನು ಈ ವಿಧಾನಸಭೆಗೆ ಚುನಾಯಿತರಾಗಿ ಒಂದೇ ವರ್ಷ ಆದರೆ ೧೯೭೨ ರಲ್ಲಿ ಬಂದಿರತಕ್ಕವರು. ಆಗ ಅವರು ಸಂಸ್ಥಾ ಕಾಂಗ್ರೆಸ್ ಅಧ್ಯಕ್ಷರಾಗಿ ಮೊದಲ ಬಾರಿ ಗೆದ್ದು ಬಂದರು. ಇತ್ತ ಕಡೆ ವಿರೋಧಪಕ್ಷದಲ್ಲಿ ಕುಳಿತ ಅವರು ಹೊಸಬರಾಗಿದ್ದರು, ನಾನೂ ಹೊಸಬನಾಗಿದ್ದೆ. ಅನೇಕ ಸಂದರ್ಭಗಳಲ್ಲಿ ಚರ್ಚೆ ನಡೆಯುತ್ತಿದ್ದಾಗ ಎದ್ದು ನಿಂತು ಚುರುಕಿನಿಂದ ಮಾತನಾಡತಕ್ಕಂಥ ಕಲೆಯನ್ನು ನಾನು ಅವರಿಂದ ಕಲಿತೆ. ಅಷ್ಟೇ ಅಲ್ಲದೆ, ಅವರು ಬಹಳ ಸ್ನೇಹಮಯಿಯಾಗಿದ್ದರು. ಅವರು ನಮ್ಮನ್ನು ವಿರೋಧ ಪಕ್ಷವನ್ನು ಬಿಟ್ಟು ಕಾಂಗ್ರೆಸ್ ಪಕ್ಷವನ್ನು ಸೇರಿದಾಗಲೂ ಕೂಡ ಪಕ್ಷದ ವ್ಯತ್ಯಾಸವನ್ನು ಯಾವತ್ತೂ ಮೈಗೂಡಿಸಿಕೊಂಡಿರಲಿಲ್ಲ, ಆ ಸ್ನೇಹಕ್ಕೆ ಚ್ಯುತಿ ತಂದುಕೊಂಡಂಥವರೂ ಆಗಿರಲಿಲ್ಲ, ಅಂತಹವರು ಇವೊತ್ತು ನಮ್ಮೆಲ್ಲರನ್ನೂ ಅಗಲಿದ್ದಾರೆ. ಅವರು ಇವೊತ್ತಿನ ವಿಧಾನಸಭೆಯಲದೆ ಮುಂದೆ ಚುನಾವಣೆಯಾಗಿ ಬರುವ ವಿಧಾನಸಭೆಯಲ್ಲೂ ಇದ್ದಿದ್ದರೆ ಈ ಸದನ ಶೋಭಾಯಮಾನವಾಗಿ ಇರುತ್ತಿತ್ತು ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಮೃತರಾದ ಮತ್ತೊಬ್ಬ ಸದಸ್ಯರಾದ ಶ್ರೀ ಸಿದ್ದಮಾದಯ್ಯನವರೂ ಸಹ ಸಾಧು ಪ್ರಾಣಿಗಳಲ್ಲಿ ಅತ್ಯಂತ ಸಾಧು ಪ್ರಾಣಿಯಾಗಿದ್ದರು. ಅವರು ಜೋರಾಗಿ ಮಾತನಾಡತಕ್ಕಂಥ ಸ್ವಭಾವವನ್ನು ಹೊಂದಿದವರಾಗಿರಲಿಲ್ಲ. ಅವರು

ಈ ಸದನದಲ್ಲಿ ಎದ್ದು ನಿಂತು ಯಾವುದಾದರೊಂದು ವಿಷಯದ, ಅದರಲ್ಲೂ ಮುಖ್ಯವಾಗಿ ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಸಂಬಂಧಿಸಿದ ಪ್ರಶ್ನೆಗಳೇನಾದರೂ ಪ್ರಸ್ತಾಪವಾದರೆ ಅದಕ್ಕೆ ಸೂಕ್ತವಾದ ಉತ್ತರ ಸಿಕ್ಕಿ ತಮಗೆ ತೃಪ್ತಿಯಾಗುವವರೆಗೂ ಮಾನ್ಯ ಅಧ್ಯಕ್ಷರನ್ನೂ ಬಿಡುತ್ತಿರಲಿಲ್ಲ, ಮಾನ್ಯ ಮಂತ್ರಿಗಳನ್ನೂ ಬಿಡುತ್ತಿರಲಿಲ್ಲ. ಈ ರೀತಿಯಿಂದ ಚುರುಕಾಗಿ ಕೆಲಸ ಮಾಡುತ್ತಿದ್ದರು. ಮತ್ತೊಬ್ಬರು ಈ ಸದನದ ಸದಸ್ಯರಾಗಿದ್ದ ದಿವಂಗತ ಚಿನ್ನಪ್ಪನವರು ನಮ್ಮ ಜಿಲ್ಲೆಯವರು. ಅವರ ವಿಷಯವಾಗಿ ಒಂದು ವಿಚಾರ ಹೇಳಬೇಕೆಂದರೆ, ಇಡೀ ರಾಜ್ಯದಲ್ಲಿ ಅತ್ಯಂತ ಅಲ್ಪ ಜಾತಿಯ ಜನಾಂಗದವರೇನಾದರೂ ಇದ್ದಾರೆಂದರೆ ಅವರ ಜಾತಿಯವರು ಮಾತ್ರ. ಅವರ ಜಾತಿಯನ್ನು ಲೆಕ್ಕ ಹಾಕಿದರೆ ರಾಜ್ಯಾದ್ಯಂತ ೧,೦೦೦ ಅಥವಾ ೨,೦೦೦ ಜನರಿರಬಹುದು. ಅವರ ಕ್ಷೇತ್ರದಲ್ಲೂ ಸಹ ಅವರ ಜಾತಿಯವರೇನಾದರೂ ಇದ್ದರೆ ಅವರ ಕುಟುಂಬ ಮತ್ತು ಇನ್ನಿತರ ೨-೩ ಕುಟುಂಬಗಳಿರಬಹುದು ಅಷ್ಟೆ. ಅವರ ಕ್ಷೇತ್ರ ಬೇತಮಂಗಲ ವಾಗಿದ್ದು, ಅಲ್ಲಿ ಹಿಂದೆ ಪಂಚಾಯತ್ ಅಧ್ಯಕ್ಷರಾಗಿ ಗೆದ್ದು ಸೇವೆ ಸಲ್ಲಿಸಿ ಇಲ್ಲಿಗೆ ಬಂದಾಗ ಅವರನ್ನು ಬಹಳಷ್ಟು ಜನರು ಗುರ್ತಿಸಿದ್ದರು. ಈ ಸಂದರ್ಭದಲ್ಲಿ ಒಂದು ಹೆಮ್ಮೆಯ ಮಾತನ್ನು ಹೇಳಬೇಕಾಗುತ್ತದೆ. ಅಂತಹವರಿಗೆ ನಮ್ಮ ಪಕ್ಷದ ವತಿಯಿಂದ ಒಂದು ಟಿಕೆಟ್ ಕೊಡಿಸುವುದರಲ್ಲಿ ನಾನು ಮಹತ್ತರ ಪಾತ್ರ ವಹಿಸಿದ್ದೆ. ಚುನಾವಣೆಯಲ್ಲಿ ಅವರನ್ನು ನಿಲ್ಲಿಸಿ ಗೆಲ್ಲಿಸಬೇಕೆಂಬ ಹಠ ಮಾಡಿ ಅವರಿಗೆ ರಾತ್ರಿ ಎರಡು ಗಂಟೆಗೆ ಅವರಿಗೆ ಪಕ್ಷದ ವತಿಯಿಂದ ಟಿಕೇಟ್ ಕೊಡಿಸಿದೆ, ಅವರು ಚುನಾವಣೆಯಲ್ಲಿ ಗೆದ್ದು ಬಂದರು. ಈ ರಾಜ್ಯದಲ್ಲಿ ಅತ್ಯಂತ ಅಲ್ಪ ಜನಾಂಗಕ್ಕೆ ಸೇರಿದವರಾಗಿದ್ದರೂ ಸಹ ತಮ್ಮ ಕ್ಷೇತ್ರದಲ್ಲಿ ಅವರು ಗೌರವವನ್ನು ಹೆಚ್ಚಿಸಿಕೊಳ್ಳುವುದರಲ್ಲಿ ಅತ್ಯಂತ ಮೇಲ್ಪಟ್ಟಕ್ಕೆ ಏರಿರತಕ್ಕಂಥವರು ದಿವಂಗತ ಚಿನ್ನಪ್ಪನವರು. ಇವೊತ್ತು ಅವರು ನಮ್ಮನ್ನು ಅಗಲಿದ್ದಾರೆ. ಅವರು ಆ ಸಣ್ಣ ಜನಾಂಗದಲ್ಲಿ ಹುಟ್ಟಿದ್ದರೂ ಬೆಳೆದಂಥ ಎತ್ತರ ಅಷ್ಟಿತ್ತು. ಅವರ ನಿಧನದಿಂದ ಆ ಜನಾಂಗಕ್ಕೆ ಮತ್ತು ರಾಜ್ಯಕ್ಕೆ ಅಪಾರವಾದ ನಷ್ಟವಾಗಿದೆ ಎನ್ನುವ ಮಾತನ್ನು ಹೇಳಿ, ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲೆಂದು ಆಶಿಸಿ ತಮ್ಮ ಒಂದು ಅಭಿಪ್ರಾಯಕ್ಕೆ ನನ್ನ ಒಪ್ಪಿಗೆಯನ್ನೂ ಸಹ ಸೂಚಿಸಿ, ಇಷ್ಟು ಮಾತುಗಳನ್ನು ಆಡುವುದಕ್ಕೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

೧೧–೩೫ ಎ. ಎಂ.

† ಶ್ರೀ ವೈ. ಕೆ. ರಾಮಯ್ಯ (ಕುಣಿಗಲ್).—ಸನ್ಮಾನ್ಯ ಅಧ್ಯಕ್ಷರೆ, ಈ ದಿನ ಈ ಸದನದ ಹಾಲಿ ಸದಸ್ಯರು ಮತ್ತು ಮಾಜಿ ಸದಸ್ಯರು ಮತ್ತು ಇತರೆ ಸದಸ್ಯರುಗಳ ನಿಧನದಿಂದ ಆಗಿರತಕ್ಕ ಅಪಾರವಾದ ನಷ್ಟಕ್ಕೆ ಅವರುಗಳಿಗೆ ಸಂತಾಪವನ್ನು ಸೂಚನೆ ಮಾಡುವುದಕ್ಕೆ ತಾವು ನಿಲುವಳಿಯನ್ನು ತಂದಿದ್ದೀರಿ, ಆದಕ್ಕೆ ನಾನು ಬಹಳವಾಗಿ ಅಭಿನಂದಿಸುತ್ತಾ, ನನ್ನ ಜಿಲ್ಲೆಯವರೇ ಆದಂಥ ಶ್ರಿಮಾನ್ ಟಿ. ಎಂ. ಮಂಜುನಾಥ್‌ರವರ ಬಗ್ಗೆ ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಮನಸ್ಸು ಮಾಡಿದ್ದೇನೆ. ನನ್ನ ಹನ್ನೆರಡು ವರ್ಷಗಳ ಈ ಸೇವೆಯಲ್ಲಿ ಸಂತಾಪ ಸೂಚಕ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಿರತಕ್ಕದ್ದು ಇದೇ ಮೊಟ್ಟಮೊದಲನೆಯಬಾರಿ. ಈ ರೀತಿ ಆಗಬಾರದಿತ್ತು. ಮಾನ್ಯ ಮಂಜುನಾಥ್‌ರವರ ಬಗ್ಗೆ ಇದ್ದಂಥ ಅಭಿಪ್ರಾಯವನ್ನು ಹೇಳದಿದ್ದರೆ ಅವರ ಆತ್ಮಕ್ಕೆ ದ್ರೋಹವನ್ನು ಬಗೆದಂತಾಗುತ್ತದೆ ಎನ್ನತಕ್ಕ ದೃಷ್ಟಿಯಿಂದ ಕೆಲವು ಮಾತುಗಳನ್ನು ಹೇಳುತ್ತೇನೆ. ಮಾನ್ಯ ಮಂಜುನಾಥ್ ರವರು ಅತ್ಯಂತ ಶ್ರೀಮಂತ ಕುಟುಂಬಕ್ಕೆ ಸೇರಿದಂಥವರು. ನನಗೆ ತಿಳಿದಮಟ್ಟಿಗೆ ಅವರು ರಾಜಕೀಯಕ್ಕೆ ಕಾಲಿಟ್ಟಾಗ ಅವರಿಗೆ ಅಪಾರವಾದಂಥ ಆಸ್ತಿ ಇತ್ತು. ಆದರೆ ಅವರಿಗೆ ಈಗ ಉಳಿದುಕೊಂಡಿರತಕ್ಕ ಸಾಲ ಎಷ್ಟಿದೆಯೊ ನನಗೆ ಗೊತ್ತಿಲ್ಲ, ಒಂದೇ ಒಂದು ಬಡ ಚಿತ್ರಮಂದಿರ ಉಳಿದುಕೊಂಡಿರಬಹುದು. ನಾನು ತುಮಕೂರು ಜಿಲ್ಲೆಯಲ್ಲಿ ಅವರ ಬಗ್ಗೆ ಅನೇಕ ಸಲ ಬಹಳ ಕಟುವಾಗಿ ನಡೆದುಕೊಂಡಿದ್ದೇನೆ, ಮುಷ್ಕರ ಮಾಡಿದ್ದೇನೆ, ಗದಾಯುದ್ಧ ಮಾಡಿದ್ದೇನೆ, ಆದರೆ ಅವರನ್ನು ಎಂದೇ ಆಗಲಿ, ಯಾವ ಕಾರಣಕ್ಕೇ ಆಗಲಿ ಭ್ರಷ್ಟರೆಂದು ಕರೆಯಲಿಲ್ಲಿ. ಆ ಒಂದು ದೃಷ್ಟಿಯಿಂದ ಅವರನ್ನು ಮೆಚ್ಚಿಕೊಂಡಿದ್ದೆ. ಅವರ ಎರಡೆಯ ದೊಡ್ಡ ಗುಣವೆಂದರೆ, ಯಾರು ಎಷ್ಟೇ ಗಲಾಟೆ ಮಾಡಲಿ, ಅವರನ್ನು ವಿರೋಧ ಮಾಡಲಿ ಅದನ್ನು ಎಂದೂ ಮನಸ್ಸಿನಲ್ಲಿಟ್ಟುಕೊಳ್ಳುತ್ತಿರಲಿಲ್ಲ. ಒಂದು ದಿನ ಅವರು ಜಿಲ್ಲಾ ಸಚಿವರಾಗಿ ಒಂದು ಕಡೆ ನಾನು ವಿರೋಧ ಪಕ್ಷದವನಾಗಿ ಮತ್ತೊಂದು ಕಡೆ ಕುಳಿತುಕೊಂಡು ನಾನು ಅವರ ಬಗ್ಗೆ ಬಹಳ ಕಠೋರವಾಗಿ ಮಾತುಗಳನ್ನಾಡಿದರೂ ಸಹ, ಅವರ ಮತ್ತು ನನ್ನ ಮಧ್ಯ ಕಠೋರವಾದ ಮಾತುಗಳ ಬದಲಾವಣೆಗಳಾದರೂ ಸಹ, ಅನಂತರ ಹೊರಗಡೆ ಬಂದಾಗ ಹುಚ್ಚಮಾಸ್ತಿಗೌಡರ ಕೈಯನ್ನು ಹಿಡಿದುಕೊಂಡು ನೀವಾದರು ಈ ರಾಮಯ್ಯನವರಿಗೆ ಬುದ್ಧಿ ಹೇಳಿ ಎಂದು ಹೇಳಿದರು. ಅದೇರೀತಿ ಅನೇಕ ಸಂದರ್ಭಗಳಲ್ಲಿ ನಾವು ಎಷ್ಟೇ ಕಟುವಾಗಿ ಅವರೊಂದಿಗೆ ನಡೆದುಕೊಂಡರೂ ಸಹ ಅವರು ಮನಸ್ಸಿನಲ್ಲಿ ಆ ವಿಷಯವನ್ನು ಉಳಿಸಿಕೊಳ್ಳುತ್ತಿರಲಿಲ್ಲ. ಸ್ವಚ್ಛ ಮನಸ್ಸನ್ನು ಪ್ರೀತಿಸತಕ್ಕ ಗುಣ ಅವರಲ್ಲಿತ್ತು. ಅವರು ಕೆಳಹಂತದಿಂದ ಬೆಳೆದುಬಂದಂಥ ಒಬ್ಬ ನಾಯಕರು. ತಾಲ್ಲೂಕು ಬೋರ್ಡ್‌ನಲ್ಲಿ ಅಧ್ಯಕ್ಷರಾಗಿ ಕೆಲವು ವರ್ಷ ಕೆಲಸ ಮಾಡಿದ್ದರು, ನಮ್ಮ ಜೊತೆಯಲ್ಲಿ 'ಓ ಕಾಂಗ್ರೆಸ್'ನಲ್ಲಿ ಕೆಲಸ ಮಾಡಿದ್ದರು, ಅನಂತರ ಜನತಾಪಕ್ಷದಲ್ಲೂ ಸಹ ಇದ್ದರು. ಶ್ರೀಮಾನ್ ವೀರೇಂದ್ರ ಪಾಟೀಲರು ಅವರಿಗೆ ಜನತಾಪಕ್ಷದಲ್ಲಿದ್ದಾಗ ಬಹಳ ಹತ್ತಿರದಲ್ಲಿದ್ದವರಲ್ಲಿ ಒಬ್ಬರಾಗಿದ್ದರು. ೧೯೭೭ನೇ ಇಸವಿಯ ಚುನಾವಣೆಯಲ್ಲಿ ತಿಪಟೂರಿನಲ್ಲಿ ಇಬ್ಬರು ವ್ಯಕ್ತಿಗಳಿದ್ದರು, ಆಗ ವೀರೇಂದ್ರ ಪಾಟೀಲರು ಮಂಜುನಾಥ್‌ರವರಿಗೆ ಫೋನ್ ಮಾಡಿ ಚುನಾವಣೆಗೆ ಟಿಕೇಟ್‌ನ್ನು ಕೊಡುವ ಬಗ್ಗೆ ಮಾತನಾಡಿ ಇನ್ನೊಬ್ಬರು ವ್ಯಕ್ತಿಯಾದ ಶ್ರೀ ಎಂ. ರಾಮಣ್ಣನವರು ಎಲ್ಲಿ ಎಂದು ಕೇಳಿದ್ದರು. ಅದಕ್ಕೆ ಮಂಜುನಾಥ್‌ರವರು ಅವರು ನಿಮ್ಮ ಮನೆಯ ಆಡುಗೆಮನೆಯಲ್ಲಿಯೋ ಇನ್ನೆಲ್ಲಿಯೋ ಇರುತ್ತಾರೆ, ನನಗೇನು ಗೊತ್ತು ಎಂದು ಹೇಳಿದರು. ಅಷ್ಟೊಂದು ಸಿಕಟವಾಗಿ ಅವರು ಇದ್ದರು. ಅನಂತರ ಅವರು ಕಾಂಗ್ರೆಸ್ ಪಕ್ಷಕ್ಕೆ ಹೋದರು. ಮಂತ್ರಿಗಳಾಗಿ ಕೆಲಸ ಮಾಡಿದರು. ನಾನು ಮಂತ್ರಿಯಾಗಿದ್ದಾಗ ಅವರು ಜಿಲ್ಲಾಪರಿಷತ್‌ನ ಸದಸ್ಯರಾಗಿ, ಜಿಲ್ಲಾಪರಿಷತ್‌ನ ವಿರೋಧಪಕ್ಷದ ಮುಖಂಡರಾಗಿ ಕೆಲಸ ಮಾಡಿದರು. ಅನೇಕ ಸಂದರ್ಭಗಳಲ್ಲಿ ನಾವು ಅವರನ್ನು ಕಟುವಾಗಿ ಟೀಕಿಸಿದರೂ ಸಹ, ನಮ್ಮ ಮತ್ತು ಅವರಲ್ಲಿ ಮತಭೇದವಿದ್ದರೂ ಸಹ ಆ ಮನುಷ್ಯ ಭ್ರಷ್ಟತನದಿಂದ ಹೊರತಾಗಿದ್ದ ದಿಟ್ಟ ರಾಜಕಾರಣಿಯಲ್ಲಿ ಒಬ್ಬರು ಎನ್ನತಕ್ಕ ಮಾತನ್ನು ಬಹಳ ಸಂತೋಷದಿಂದ ಹೇಳಬಯಸುವೆ. ಇತ್ತೀಚಿನ ದಿನಗಳಲ್ಲಿ ಅವರಿಗೆ ಖಾಯಿಲೆ ಯಾವಾಗ ಜಾಸ್ತಿಯಾಯಿತೋ, ಸ್ವಲ್ಪ ದಿನಗಳ ಹಿಂದೆ ಅವರಿಗೆ ಸೀರಿಯಸ್ ಆಯಿತೋ ಎಂಬ ಬಗ್ಗೆ ನನಗೆ ಸ್ವಲ್ಪ ಅರಿವಿದೆ. ಅದೇನೆಂದರೆ, ಯಾವ ವ್ಯಕ್ತಿ ಪ್ರಾಮಾಣಿಕ, ದಕ್ಷ, ಯೋಗ್ಯನಾಗಿರುತ್ತಾನೋ ಅವೆಲ್ಲವುಗಳನ್ನು ನಿರ್ಲಕ್ಷಿಸತಕ್ಕ ವ್ಯವಸ್ಥೆ ದರಿದ್ರ ವ್ಯವಸ್ಥೆ ನಮ್ಮಲ್ಲೀನಿದೆ ಅದು ಇಂಥ ವ್ಯಕ್ತಿಗಳನ್ನು ನಡೆಸಿಕೊಂಡು ಹೋಗತಕ್ಕ ಯೋಗ್ಯತೆ ಇಲ್ಲ, ಇಂಥ ವ್ಯವಸ್ಥೆಗೆ ಟಿ. ಎಂ. ಮಂಜುನಾಥ್‌ರವರು ಬಲಿಯಾದರು, ಇಲ್ಲದಿದ್ದರೆ ಅವರು ಇನ್ನೂ ಸ್ವಲ್ಪ ದಿನ ಬದುಕುತ್ತಿದ್ದರೆಂದು ನನ್ನ ಭಾವನೆ. ಈ ದರಿದ್ರ ವ್ಯವಸ್ಥೆಗೆ ಪ್ರಾಮಾಣಿಕವಾದ, ದಕ್ಷರಾದ, ಯೋಗ್ಯರಾದ ಜನರನ್ನು

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿರುವುದನ್ನು ಸೂಚಿಸುತ್ತದೆ.

ನಡೆಸಿಕೊಳ್ಳತಕ್ಕ ಯೋಗ್ಯತೆ ದೊಡ್ಡತನವಿದ್ದರೆ ಅವರು ಇನ್ನೂ ಸ್ವಲ್ಪ ದಿನ ಬದುಕುತ್ತಿದ್ದರು. ಅವರ ಆತ್ಮಕ್ಕೆ ಶಾಂತಿ ಕೋರುತ್ತಾ, ಅವರ ಮೃತ್ಯುವಿನಿಂದ ಅವರ ಕುಟುಂಬದವರಿಗಾಗಿರುವ ದುಃಖವನ್ನು ತಡೆಯತಕ್ಕ ಶಕ್ತಿಯನ್ನು ದೇವರು ಕೊಡಲಿ ಎಂದು ಪ್ರಾರ್ಥಿಸಿ, ನನಗೆ ಇಷ್ಟು ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟ ತಮಗೆ ನಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಎಸ್, ಬಂಗಾರಪ್ಪ (ಸೊರಬ).—ಸನ್ಮಾನ್ಯ ಸಭಾಧ್ಯಕ್ಷರೆ, ತಾವು ಮಂಡಿಸಿರತಕ್ಕ ಈ ಸಂತಾಪ ಸೂಚಕ ನಿರ್ಣಯಕ್ಕೆ ಈ ಸದನದ ಎಲ್ಲ ಮೂಲೆಗಳಿಂದ ಸಿಕ್ಕಿರತಕ್ಕ ಬೆಂಬಲಕ್ಕೆ ನಾನೂ, ನನ್ನ ಪಕ್ಷ ಎರಡೂ ಸೇರಿ ಬೆಂಬಲವನ್ನು ನೀಡಿ ಸಂತಾಪ ಸೂಚಕ ನಿರ್ಣಯದ ಚರ್ಚೆಯಲ್ಲಿ ಭಾಗವಹಿಸಿ ಇದನ್ನು ಪಾಸ್ ಮಾಡಲು ತಮಗೆ ನಮ್ಮ ಸಂಪೂರ್ಣ ಬೆಂಬಲವನ್ನು ಕೊಡುತ್ತಿದ್ದೇವೆ.

ಅನೇಕ ಜನ ಮಹಾನುಭಾವರು ನಮ್ಮನ್ನು ಅಗಲಿ ಹೋಗಿದ್ದಾರೆ. ನಾವು ಎಷ್ಟೋ ಸಾರಿ ಮಾತನಾಡಿಕೊಳ್ಳುತ್ತೇವೆ, ಪರಸ್ಪರ ಭಿನ್ನಾಭಿಪ್ರಾಯಗಳು ಬರತಕ್ಕದ್ದು ಸಹಜವಾದುದು. ಪಕ್ಷದ ಆಧಾರದ ಮೇಲೆ ಅಥವಾ ನಮ್ಮ ಮುಂದೆ ಬರುವಂಥ ಚರ್ಚೆಯ ಆಧಾರದ ಮೇಲೆ, ಭಿನ್ನಾಭಿಪ್ರಾಯ ಬರಬಹುದು. ಆದರೆ ಅದು ವೈಯುಕ್ತಿಕ ಅಲ್ಲ. ಅದು ಯಾರೇ ಇರಬಹುದು, ಎಲ್ಲೇ ಇರಬಹುದು. ಈ ಅವಧಿಯಲ್ಲಿ ಸದಸ್ಯರು, ಸಚಿವರು ಆಗಿರುವಾಗ ಪ್ರಾಮಾಣಿಕವಾದ ತಮ್ಮ ತಮ್ಮ ಕರ್ತವ್ಯಗಳನ್ನು ಮಾಡುತ್ತಿರುತ್ತಾರೆ. ಹಾಗೆ ಮಾಡುವಾಗ ನಾವೆಲ್ಲರೂ ಈ ರಾಜ್ಯದ ಜನತೆಯ ಸೇವಕರಾಗಿದ್ದೇವೆಂಬುದಕ್ಕೆ ಇದು ಆಧಾರವಾಗಿದೆ, ಈ ವಿಚಾರದಲ್ಲಿ ರಾಜ್ಯಬೇರೆ, ರಾಷ್ಟ್ರ ಬೇರೆ ಎನ್ನತಕ್ಕದ್ದು ಅಪ್ರಕೃತ. ಏಕೆಂದರೆ, ಪಂಜಾಬಿನ ರಾಜ್ಯಪಾಲರಾಗಿದ್ದ ಮಾನ್ಯ ಸುರೇಂದ್ರನಾಥ್‌ರವರು ತುಂಬಾ ಪರಿಚಿತರು. ನನಗೆ ತಿಳಿದಂತೆ ಅವರು ಬಹಳ ಒಳ್ಳೆಯ ವ್ಯಕ್ತಿ. ಅವರ ಅಕಾಲ ಮರಣ ಕೇವಲ ಅವರೊಬ್ಬರನ್ನೇ ಸೆಳೆಯಲಿಲ್ಲ. ಅವರ ಕುಟುಂಬದ ಪೈಕಿ ಒಬ್ಬಿಬ್ಬರನ್ನು ಬಿಟ್ಟರೆ ಉಳಿದವರೆಲ್ಲರೂ ವಿಮಾನದಲ್ಲಿ ಹೋಗುವಾಗ ಸಂಪೂರ್ಣವಾಗಿ ದುರ್ಘಟನೆಗೆ ಒಳಗಾದರೆಂಬುದನ್ನು ತಿಳಿದು ಬಹಳ ದುಃಖವಾಯಿತು. ಅದು ಇಡೀ ರಾಜ್ಯಕ್ಕೆ ಒದಗಿದಂಥ ದುಃಖ ಕೂಡ ಹೌದು, ಅದೇ ರೀತಿ ನಮ್ಮ ಮಾನ್ಯ ಟಿ. ಎಂ. ಮಂಜುನಾಥ್‌ರವರು ನನ್ನ ಮಂತ್ರಿ ಮಂಡಲದಲ್ಲಿ ಸಚಿವರಾಗಿದ್ದರು. ಅವರು ಬಹಳ ಮೃದು ಸ್ವಭಾವದವರು. ಒಳ್ಳೆಯ ವ್ಯಕ್ತಿ. ಕೆಲವೊಂದು ಸಂದರ್ಭದಲ್ಲಿ ಅವರು ತಮ್ಮ ಅಭಿಪ್ರಾಯವನ್ನು ವ್ಯಕ್ತಮಾಡುವಾಗ ತಮ್ಮ ಸ್ವಾತಂತ್ರ್ಯವನ್ನು ವ್ಯಕ್ತ ಮಾಡುತ್ತಿದ್ದರು, ತಪ್ಪು ತಿಳುವಳಿಕೆಗೆ ಅವಕಾಶವೇ ಇಲ್ಲದ ರೀತಿಯಲ್ಲಿ ತಮ್ಮ ಸ್ವಾತಂತ್ರ್ಯವನ್ನು ಅಭಿವ್ಯಕ್ತಮಾಡುವಂಥ ವಿಚಾರಧಾರೆ ಅವರಲ್ಲಿತ್ತು. ಮಾನ್ಯ ಮಂಜುನಾಥ್‌ರವರು ಇಷ್ಟೊಂದು ಬೇಗ ಅಗಲಿಹೋಗುತ್ತಾರೆಂದು ನಾವು ತಿಳಿದುಕೊಂಡಿರಲಿಲ್ಲ, ಏಕೆಂದರೆ, ಅವರ ಆರೋಗ್ಯ ಸರಿ ಇಲ್ಲವೆಂಬುದು ನಮಗೆ ಗೊತ್ತಿದ್ದರೂ ಕೂಡ ಇಷ್ಟೊಂದು ಬೇಗ ಹೋಗುತ್ತಾರೆಂಬುದು ಯಾರಿಗೂ ಗೊತ್ತಿರಲಿಲ್ಲ. ಅವರ ಅಗಲುವಿಕೆಯಿಂದ ಆಗಿರತಕ್ಕ ನಷ್ಟ ಕೇವಲ ಅವರ ಕುಟುಂಬದವರಿಗೆ ಮಾತ್ರವಲ್ಲ, ಅದು ನಮ್ಮ ಈ ಸದನಕ್ಕೆ, ತನ್ಮೂಲಕ ರಾಜ್ಯಕ್ಕೆ ಆಗಿರತಕ್ಕ ಅಪಾರ ನಷ್ಟ ಎಂಬುದನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ. ಇದೇ ರೀತಿ ಮಾನ್ಯ ಸಿದ್ದವ್ವನಹಳ್ಳಿ ನಂಜಯ್ಯನವರು, ನಂಗಂದರ ಶಾಸಕರಾದ ಮಾನ್ಯ ಪಾಟೀಲ್‌ರವರು ಬಸವರಾಜು ರವರು ಇವರೆಲ್ಲರೂ ನನಗೆ ಚೆನ್ನಾಗಿ ಪರಿಚಯ ಇರುವವರು. ಇವರಲ್ಲಿ ನಾನು ಸದಸ್ಯನಾಗುವುದಕ್ಕಿಂತ ಮುಂಚಿತವಾಗಿ ಇಲ್ಲಿಗೆ ಸದಸ್ಯರಾಗಿ ಯಾರಾದರೂ ಬಂದಿದ್ದರೆ, ಅಂದರೆ ಕ್ವಿಟ್ ಇಂಡಿಯಾ ಚಳುವಳಿ ಅಥವಾ ಅದೇ ಸಂದರ್ಭದಲ್ಲಿ ಇದ್ದವರಾದರೆ ಅವರು ನನಗೆ ಗೊತ್ತಿಲ್ಲ. ಏಕೆಂದರೆ ನಾನು ಆ ಕಾಲದವನಲ್ಲ. ನಾನು ೧೯೮೭ ರಿಂದ ಒಂದೇ ಸಮನೆ ಈ ಸದನದಲ್ಲಿ ಸದಸ್ಯನಾಗಿರುವುದರಿಂದ ಸ್ವಲ್ಪ ಹೆಚ್ಚು ಕಡಿಮೆ ಎಲ್ಲ ಸದಸ್ಯರೂ ನನಗೆ ಪರಿಚಯ ಇರುವವರೇ ಆಗಿದ್ದಾರೆ. ಈ ಸದನದ ಕಾರ್ಯ ಕಲಾಪಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವ ಸಂದರ್ಭದಲ್ಲಿ ಪರಸ್ಪರ ಸಂಪರ್ಕ ಇದ್ದೇ ಇರುತ್ತದೆ. ಇಪತ್ತು ನಾವು ಎಷ್ಟೋ ಜನರು ಇಲ್ಲಿ ಸೇರಿದ್ದೇವೆ. ಇಂಥ ಕಾರಣದಿಂದ ನಾನು ಅನೇಕ ಮಾನ್ಯ ಸದಸ್ಯರ ಪರಿಚಯವಾಗುವುದಕ್ಕೆ ಸಹಕಾರಿಯಾಯಿತು. ಇಂಥಾದ್ದರಲ್ಲಿ ಮಾನ್ಯ ನಂಜೇಗೌಡರು, ಮಾನ್ಯ ಬಸವರಾಜುರವರು, ಎಂ, ಮಾದಯ್ಯನವರು, ಎ. ಚಿನ್ನಪ್ಪನವರು, ರಾಮಾದೇವ್‌ರವರು ಬೆಂಗಳೂರು ನಗರದಿಂದ ಆಯ್ಕೆಯಾಗಿದ್ದವರು) ಆಲೂರು ಹನುಮಂತಪ್ಪನವರು ಬಹುಶಃ ಫಾರೆಸ್ಟ್ ಇಲಾಖೆಯ ತಜ್ಞರು ಎಂದು ಕಾಣಿಸುತ್ತದೆ. ಅವರು ಮಾನ್ಯ ವೀರೇಂದ್ರಪಾಟೀಲರ ಮಂತ್ರಿ ಮಂಡಲದಲ್ಲಿದ್ದರು ಎಂದು ಕಾಣಿಸುತ್ತದೆ. ಅದೇ ರೀತಿ ತರೀಕೆರೆಯ ಮಿತ್ರರಾದ ಮಾನ್ಯ ಪರಮೇಶ್ವರ್‌ರವರು, ಮುನಿಯಪ್ಪನವರು, ಸಾಣಿಕೊಪ್ಪದವರು ಮತ್ತು ಮಾನ್ಯ ಆನಂದರಾಯರು.

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಕಳೆದ ೧೯ನೇ ತಾರೀಖು ನಾನು ಕಾರವಾರಕ್ಕೆ ಹೋಗುವ ಮಾರ್ಗದಲ್ಲಿ ಮಾನ್ಯ ಮಳ್ಳೂರ್ ಆನಂದರಾಯರು ಅಸ್ವಸ್ಥರಾಗಿ ಆಸ್ಪತ್ರೆಯಲ್ಲಿದ್ದಾರೆಂದು ವಿಷಯ ತಿಳಿದ ಕೂಡಲೇ ನಾನು ಆಸ್ಪತ್ರೆಗೆ ಹೋಗಿ ಅವರನ್ನು ಮಾತನಾಡಿಸಿಕೊಂಡು ಬಂದೆ. ಅವರ ಆರೋಗ್ಯ ತುಂಬಾ ಹದಗೆಟ್ಟಿತ್ತು. ನಾನು ಹೋಗಿ ನೋಡಿದಾಗ ಜೊತೆಯಲ್ಲಿ ಕುಟುಂಬದವರಿದ್ದರು. ಅವರ ಧರ್ಮ ಪತ್ನಿ, ಮಗ ಎಲ್ಲರೂ ಇದ್ದರು. ನಾವು ನೀವು ಹೋಗಿ ನೋಡತಕ್ಕ ಸಂದರ್ಭದಲ್ಲಿ ದೇವರು ಸಹಾಯ ಮಾಡಲಿ, ಹಲವು ಕಾಲ ಬದುಕಲು ದೇವರು ಶಕ್ತಿ ಕೊಡಲಿ, ಅವರ ಆರೋಗ್ಯ ತಿರುಗಿ ಬರಲಿ ಎಂಬ ಹೆಬ್ಬಯಕೆ ವ್ಯಕ್ತಪಡಿಸುವುದು ಬಿಟ್ಟರೆ ಬೇರೆ ಏನೂ ಇರುವುದಿಲ್ಲ. ಆದರೆ ಮರಣ ಅವರನ್ನು ಸೆಳೆಯಿತು. ಶ್ರೀ ಆನಂದರಾವ್ ಅವರ ಪಕ್ಷ ಬೇರೆ ಇರಬಹುದು. ಆದರೆ ಅವರು ಬಹಳ ಒಳ್ಳೆಯ ವ್ಯಕ್ತಿ, ನಮ್ಮ ಶಿವಮೊಗ್ಗದವರೇ ಅದೇ ರೀತಿ ಬೇರೆ ಮಾನ್ಯ ಸದಸ್ಯರೂ ಕೂಡ.

ಇವತ್ತಿನ ದಿವಸ ತಂದಿರತಕ್ಕ ಈ ನಿರ್ಣಯಕ್ಕೆ ಮಾನ್ಯ ಅಧ್ಯಕ್ಷರನ್ನು ಅಭಿನಂದಿಸುತ್ತೇನೆ ಇತ್ತೀಚೆಗೆ ಬಿದ್ದಿರತಕ್ಕ ಮಳೆಯಿಂದ ಹಾನಿ ಏನಾಗಿದೆ ಅಲ್ಲಿ ಅನೇಕ ಜನರು ಸತ್ತು ಹೋದರು. ನಾನು ೬–೭ ಜಿಲ್ಲೆಗಳಿಗೆ ಆ ಸಂದರ್ಭದಲ್ಲಿ ಹೋಗಿ ಬಂದೆ. ದಕ್ಷಿಣ ಕನ್ನಡ, ಶಿವಮೊಗ್ಗ, ಹಾಸನ ಜಿಲ್ಲೆ — ಹೀಗೆ ಬಹಳ ಕಡೆಗೆ ಹೋಗಿ ಬಂದೆ. ತಾವು ಸಂತಾಪ ಸೂಚಕ ನಿರ್ಣಯದಲ್ಲಿ ಈ ವಿಚಾರವನ್ನು ಪ್ರಸ್ತಾಪಕ್ಕೆ ತಂದಿರುವುದು ಬಹಳ ಜವಾಬ್ದಾರಿಯುತವಾಗಿರತಕ್ಕ ವಿಚಾರ. ಇದು ಅರ್ಥ ಪೂರ್ಣ ಮತ್ತು ಸಮಯೋಚಿತ. ಆದಕ್ಕಾಗಿ ಮಾನ್ಯ ಅಧ್ಯಕ್ಷರಿಗೆ ಅಭಿನಂದಿಸುತ್ತೇನೆ. ಇದೇ ಸಂದರ್ಭದಲ್ಲಿ ಮತ್ತೊಂದು ವಿಚಾರವನ್ನು ಹೇಳತಕ್ಕ ಅವಶ್ಯಕತೆ ಇದೆ ಎಂದು ಭಾವಿಸುತ್ತೇನೆ. ಚಿತ್ರದುರ್ಗದ ಪೂಜ್ಯ ಸ್ವಾಮೀಜಿಯವರು ತೀರಿಕೊಂಡರು. ತಮಗೆ ಗೊತ್ತಿರುವ ಹಾಗೆ ಅವರು ಚಿತ್ರದುರ್ಗ ಮಠದ ಹಿರಿಯ ಸ್ವಾಮಿಗಳು. ಅವರಿಗೆ ಸುಮಾರು ೭೫–೮೦ ವರ್ಷ ವಯಸ್ಸು ಆಗಿತ್ತು. ಈಗ ಮಠ ನೋಡಿಕೊಳ್ಳುವುದಕ್ಕೆ ಚಿಕ್ಕ ಸ್ವಾಮಿಗಳು ಇದ್ದಾರೆ. ನನಗೆ ಅವರ ಪರಿಚಯ ಬಹಳ ಇತ್ತು. ಅವರು ಕೂಡ ದೇಹವನ್ನು ತ್ಯಜಿಸಿದಾಗ ನಾನು ಇರಲಿಲ್ಲ. ಕರ್ನಾಟಕ ರಾಜ್ಯದಲ್ಲಿ ಪ್ರವಾಸದ ಮೇಲಿದ್ದೆ. ಆದರೆ ನಮ್ಮ ಪಕ್ಷದ ವತಿಯಿಂದ ಶಾಸಕ ಮಿತ್ರರನ್ನು ಚಿತ್ರದುರ್ಗಕ್ಕೆ ಕಳುಹಿಸಿಕೊಟ್ಟಿದ್ದೆ. ಅವರು ಹೋಗಿಬಂದರು. ಅವರ ಅಗಲಿಕೆಯ ದುಃಖದಲ್ಲಿ ನಮ್ಮ ಪಕ್ಷ ಮತ್ತು ನಾವು ಭಾಗಿಯಾಗುತ್ತೇವೆ. ಈ ಸಂದರ್ಭದಲ್ಲಿ ಇದನ್ನು ಪ್ರಸ್ತಾಪಿಸಿದರೆ ಅಪ್ರಕೃತವಾಗಲಾರದು ಎಂದು ಈ ಮಾತನ್ನು ಪ್ರಸ್ತಾಪ ಮಾಡುವುದಕ್ಕೆ ಇಷ್ಟಪಡುತ್ತೇನೆ. ನಾನು ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಿದ್ದೇನೆ. ಮತ್ತು ತಮ್ಮ ಒಪ್ಪಿಗೆ ಪಡೆದು ಈ ಮಾತನ್ನು ಆಡುತ್ತಿದ್ದೇನೆ. ಇದೇ ರೀತಿಯಾಗಿ ಅನೇಕ ಮಂದಿ ಮಹನೀಯರು ಏನು ನಮ್ಮನ್ನು ಅಗಲಿ ಹೋಗಿದ್ದಾರೆ ಅವರೆಲ್ಲರ ಕುಟುಂಬಗಳಿಗೆ ನಮ್ಮ ಸಾಂತ್ವನ ಹೇಳುತ್ತಾ, ದುಃಖವನ್ನು ಭರಿಸತಕ್ಕ ಶಕ್ತಿಯನ್ನು ದೇವರು ಅವರಿಗೆಲ್ಲ ಕರುಣಿಸಲಿ ಎಂದು ಹೇಳತಕ್ಕ ಸಂದರ್ಭದಲ್ಲಿ ಮೃತರಾಗಿರತಕ್ಕವರ ಆತ್ಮಕ್ಕೆ ದೇವರು ಶಾಂತಿಯನ್ನು ದೊರಕಿಸಿಕೊಡಲಿ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ ತಾವು ತಂದಿರತಕ್ಕ ಸಂತಾಪ ಸೂಚನಾ ನಿರ್ಣಯಕ್ಕೆ ನನ್ನ ಬೆಂಬಲವನ್ನು ವ್ಯಕ್ತಪಡಿಸಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ,

† ಶ್ರೀ ಕೆ. ಎಸ್, ಈಶ್ವರಪ್ಪ (ಶಿವಮೊಗ್ಗ).—ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರುವ ಸಂತಾಪ ಸೂಚನಾ ನಿರ್ಣಯಕ್ಕೆ ವೈಯಕ್ತಿಕವಾಗಿ ಮತ್ತು ಭಾರತೀಯ ಜನತಾ ಪಕ್ಷದ ಪರವಾಗಿ ಅನುಮೋದನೆ ಸಲ್ಲಿಸುತ್ತಾ, ಶ್ರೀ ಟಿ. ಎಂ. ಮಂಜುನಾಥ, ಶ್ರೀ ಸಿದ್ದಮಾದಯ್ಯ, ಶ್ರೀ ಎಸ್, ಎಫ್. ಪಾಟೀಲ್ ಇವರನ್ನು ಖಿದ್ದು ನೋಡಿ ಅವರ ಒಡನಾಟದಲ್ಲಿದ್ದ ನನಗೆ ಅವರ ಸಾವು ತುಂಬಾ ದುಃಖವನ್ನುಂಟುಮಾಡಿದೆ. ಅನೇಕ ಹಿರಿಯ ರಾಜಕಾರಣಿಗಳನ್ನು ವ್ಯಕ್ತಿಶಃ ನೋಡುವುದಕ್ಕೆ ಆಗದಿದ್ದರೂ ಶ್ರೀ ಪಿ. ರಾಮದೇವ್, ಶ್ರೀ ಮಾದಯ್ಯ, ಶ್ರೀ ಪರಮೇಶ್ವರಯ್ಯ ಇವರ ಹೆಸರನ್ನು ಕೇಳಿದ್ದೆ. ಆದರೆ ವೈಯಕ್ತಿಕವಾಗಿ ನನಗೆ ತುಂಬಾ ಸಹಾಯವಾಗಿರುವುದು, ನನ್ನ ಜೀವನಕ್ಕೆ ನನ್ನ ವಿಚಾರಕ್ಕೆ ಸಿದ್ಧಾಂತಕ್ಕೆ ಮಾರ್ಗದರ್ಶನ ಮಾಡಿ ಅವರ ಮಾರ್ಗದರ್ಶನದಲ್ಲಿ ನಾನು ಈ ಒಂದು ರೂಪಕ್ಕೆ ಬಂದಿರುವುದು. ಶ್ರೀ ಎಂ. ಆನಂದರಾವ್ ಅವರನ್ನು ಕಳೆದುಕೊಂಡದ್ದು. ಈ ಸಂದರ್ಭದಲ್ಲಿ ನನಗೆ ಯಾವ ರೀತಿ ಶೋಕವನ್ನು ಆನುಭವಿಸಬೇಕೆಂದು ಅರ್ಥವಾಗುತ್ತಿಲ್ಲ, ಒಬ್ಬ ಮಾದರಿ ಶಾಸಕರ ರೂಪದಲ್ಲಿ ಪ್ರಾಮಾಣಿಕತೆಯಿಂದ, ದಕ್ಷತೆಯಿಂದ ಕೆಲಸ ಮಾಡಿದ ವ್ಯಕ್ತಿ ಅವರು. ಶ್ರೀ ಆನಂದರಾಯರು ಹೋದಾಗ ಯಾವ ರೀತಿ ಅವರು ಕಾರ್ಯಗಳನ್ನು ಮಾಡಿಕೊಟ್ಟರು ಎಂಬುದು ನನಗೂ ನನ್ನ ಜೀವನದಲ್ಲಿ ಮಾರ್ಗದರ್ಶನವಾಗಿದೆ.

---

† ಈ ಚಿಹ್ನೆ ಮಾನ್ಯ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ

ಅದೇ ರೀತಿ ಚಿತ್ರದುರ್ಗದ ಸ್ವಾಮಿಗಳು. ಅವರು ಇಡೀ ರಾಜ್ಯಕ್ಕೆ ಅಷ್ಟೇ ಅಲ್ಲ, ಇಡೀ ರಾಷ್ಟ್ರಕ್ಕೇ ಒಂದು ರೀತಿಯ ಜ್ಯೋತಿಯನ್ನು, ದಾರಿದೀಪವನ್ನು ತೋರಿಸುತ್ತಾ ಇದ್ದಂಥ ಮಹಾನ್ ಪೂಜ್ಯ ಸ್ವಾಮಿಗಳು. ಅವರನ್ನು ಕೂಡ ನಾವು ಕಳೆದುಕೊಂಡಿದ್ದೇವೆ. ಅದೇ ರೀತಿ ತುಂಬಾ ಮಹತ್ವಪೂರಕವಾದ ಒಂದು ಸಾಲನ್ನು ಕೂಡ ಇದರಲ್ಲಿ ಸೇರಿಸಿದ್ದೀರಿ. ಈ ಒಂದು ಮಳೆಯಿಂದ ಇಡೀ ರಾಜ್ಯದಲ್ಲಿ ಜೀವವನ್ನು ಆಸ್ತಿಪಾಸ್ತಿಗಳನ್ನು ಕಳೆದುಕೊಂಡು ಮೃತಪಟ್ಟ ವ್ಯಕ್ತಿಗಳ ಬಗ್ಗೆ ಹೇಳಿದ್ದೀರಿ. ಅದೇ ರೀತಿ ಈ ರಾಜ್ಯದಲ್ಲಿ ಇತ್ತೀಚೆಗೆ ಹುಬ್ಬಳ್ಳಿಯಲ್ಲಿರಬಹುದು, ಬೇರೆ ಬೇರೆ ಕಡೆಗಳಲ್ಲಿ ಇರಬಹುದು, ಗೋಲಿಬಾರ್‌ಗಳಲ್ಲಿ ಅಮೂಲ್ಯವಾದ ಪ್ರಾಣವನ್ನು ಕಳೆದುಕೊಂಡಂಥ ವ್ಯಕ್ತಿಗಳಿಗೆ ಕೂಡ ಈ ಸಂದರ್ಭದಲ್ಲಿ ಶ್ರದ್ಧಾಂಜಲಿಯನ್ನು ನನ್ನ ಪರವಾಗಿ ಮತ್ತು ನನ್ನ ಪಕ್ಷದ ಪರವಾಗಿ ಅರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಬಸವರಾಜಪಾಟೀಲ್ ಅಟ್ಟೂರ್ (ಬಸವಕಲ್ಯಾಣ).—ಸನ್ಮಾನ್ಯ ಅಧ್ಯಕ್ಷರೆ, ಈ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಸಂಪೂರ್ಣವಾದಂಥ ಬೆಂಬಲವನ್ನು ವ್ಯಕ್ತಪಡಿಸಿ ಬಹಳಷ್ಟು ಜನ ವಿಧಾನ ಸಭೆಯ ಶಾಸಕರು, ಮಾಜಿ ಮಂತ್ರಿಗಳು ನಿಧನರಾದ ಸುದ್ದಿ ಕೇಳಿ ನಮ್ಮ ಮನಸ್ಸಿಗೆ ತೀವ್ರವಾದಂಥ ಆಘಾತವಾಗಿವೆ. ಈ ಸಂದರ್ಭದಲ್ಲಿ ನಾನು ಕೂಡ ಅವರ ದುಃಖದಲ್ಲಿಭಾಗಿಯಾಗಿದ್ದೇನೆ. ಸನ್ಮಾನ್ಯ ಶ್ರೀ ಪಿ. ರಾಮದೇವ್ ಅವರು ನನಗೆ ಚೆನ್ನಾಗಿ ಪರಿಚಯ ಇದ್ದರು. ೧೯೮೫ನೇ ಇಸವಿಯಲ್ಲಿ ನನ್ನ ಜೊತೆಯಲ್ಲಿ ಅವರು ಶಾಸನಸಭಾ ಸದಸ್ಯರಾಗಿ ಕೆಲಸ ಮಾಡಿದ ವ್ಯಕ್ತಿಗಳಾಗಿದ್ದರು. ಶಾಸನಸಭಾ ಸದಸ್ಯರಾಗಿಬಹಳಷ್ಟು ಒಳ್ಳೆಯ ಕೆಲಸವನ್ನು ಅವರ ಕ್ಷೇತ್ರದಲ್ಲಿ ಮಾಡಿದ್ದಾರೆ. ಕಾರ್ಮಿಕರ ಇಲಾಖೆಯಲ್ಲಿ ಕೂಡ, ಕಾರ್ಮಿಕರ ಕಲ್ಯಾಣದಲ್ಲಿ ಕೂಡ, ಕಾರ್ಮಿಕರ ಸಂಘಟನೆಯಲ್ಲಿ ಕೂಡ ಸಾಕಷ್ಟು ಕೆಲಸ ಮಾಡಿದಂಥ ವ್ಯಕ್ತಿಗಳಾಗಿದ್ದು ನಮ್ಮನ್ನು ಅಗಲಿಹೋದ ಸಲುವಾಗಿ ನಮಗೆ ಅತೀವವಾದ ದುಃಖವಾಗಿದೆ ಎಂಬ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಇದರ ಜೊತೆಗೆ ಶ್ರೀ ರಾಮದೇವ್ ಅವರು ಪ್ರಾಮಾಣಿಕವಾದಂಥ ಕಾರ್ಯಕರ್ತರಾಗಿದ್ದರು. ನಿಷ್ಠಾವಂತ ಕಾರ್ಯಕರ್ತರಾಗಿ ಪ್ರಾಮಾಣಿಕವಾಗಿ ಕೆಲಸ ಮಾಡುವಂಥ ವ್ಯಕ್ತಿಗಳಾಗಿದ್ದರು. ಕೆಲವೊಂದು ಸಾರಿ ಬೆಂಗಳೂರಿನಲ್ಲಿ ಸ್ಕೂಟರ್ ಮೇಲೆ ಬರುತ್ತಿದ್ದರು. ಇಂಥ ಪ್ರಾಮಾಣಿಕವಾದಂಥ ಶಾಸಕರು ನಮ್ಮನ್ನು ಅಗಲಿರುವುದರಿಂದ ನಮ್ಮ ಮನಸ್ಸಿಗೆ ತುಂಬಾ ನೋವಾಗಿವೆ ಎಂಬ ಮಾತನ್ನು ಕೂಡ ಇಲ್ಲಿ ವಿಷಾದದಿಂದ ಹೇಳಲಿಕ್ಕೆ ಬಯಸುತ್ತೇನೆ. ಎರಡನೆಯದಾಗಿ ನನಗೆ ತಿಳಿದಂತೆ ಶ್ರೀಮಾನ್ ಎಂ. ಆನಂದರಾವ್ ಅವರು. ನಾವು ಶಾಸನಸಭಾ ಸದಸ್ಯರಾಗಿ ಬಂದಮೇಲೆ ನಮ್ಮ ಶಾಸಕರ ಭವನದ ಕೊಠಡಿಯ ಪಕ್ಕದಲ್ಲಿದ್ದರು. ಅವರು ಬಹಳ ಸರಳಜೀವಿಗಳು, ಆದರ್ಶ ವಿಚಾರವುಳ್ಳವರಾಗಿದ್ದರು. ಆನಂದರಾವ್ ಅವರ ಬಗ್ಗೆ ಹಲವಾರು ಜನ ಶಾಸನಸಭಾ ಸದಸ್ಯರು ಬಹಳಷ್ಟು ಪ್ರಶಂಸೆಯ ಮಾತುಗಳನ್ನು ಹೇಳಿದ್ದಾರೆ. ಅಂಥ ಒಬ್ಬ ಒಳ್ಳೆಯ ಆದರ್ಶ ವ್ಯಕ್ತಿಗಳಾಗಿದ್ದ ಅವರು ಬಿ.ಜೆ.ಪಿ. ಯಲ್ಲಿದ್ದರು. ಬಹಳ ಸರಳಜೀವಿಗಳು, ಸೌಮ್ಯವಾದಿಗಳಾಗಿದ್ದ ಅವರು ಬಹಳ ಒಳ್ಳೆಯ ಉತ್ಸಾಹಿಯಾಗಿ ನಮ್ಮ ಕರ್ನಾಟಕ ರಾಜ್ಯಕ್ಕೆ ಅವರ ಕ್ಷೇತ್ರಕ್ಕೆ ಗಣನೀಯವಾದ ಸೇವೆಯನ್ನು ಸಲ್ಲಿಸಿದ್ದಾರೆ. ಅಂಥವರನ್ನು ಈ ಸಂದರ್ಭದಲ್ಲಿ ಸ್ಮರಣೆ ಮಾಡುವುದು ಅವಶ್ಯಕ ಎಂಬ ಮಾತನ್ನು ಹೇಳಲಿಕ್ಕೆ ಬಯಸುತ್ತೇನೆ. ಅದೇ ಪ್ರಕಾರ ಚಿತ್ರದುರ್ಗದ ಸ್ವಾಮೀಜಿಯವರು. ಅವರು ನಿಧನರಾದ ದಿವಸ ನಾನು ತುಮಕೂರಿನಲ್ಲಿದ್ದೆ. ಶಿವಕುಮಾರ ಸ್ವಾಮಿಗಳನ್ನು ಭೇಟಿ ಮಾಡಲಿಕ್ಕೆ ಹೋಗಿದ್ದೆ. ಆಗ ನನಗೆ ಗೊತ್ತಾಯಿತು ಈ ಸ್ವಾಮಿಗಳು ತೀರಿ ಕೊಂಡರು ಎಂದು. ಅವರು ಸಂಘ ಸಂಸ್ಥೆಗಳನ್ನು ಕಟ್ಟಿಕೊಂಡು ಇಡೀ ರಾಜ್ಯಕ್ಕೆ ಗಣನೀಯವಾದ ಸೇವೆ ಮಾಡಿದಂಥ ಒಬ್ಬ ಸ್ವಾಮೀಜಿಯವರಾಗಿದ್ದರು. ಆದರ್ಶ ವಿಚಾರವುಳ್ಳವರಾಗಿದ್ದರು. ಅಂಥವರು ಕೂಡ ಅಗಲಿಹೋಗಿರುವ ಸಲುವಾಗಿ ಇವತ್ತು ಕರ್ನಾಟಕ ರಾಜ್ಯದ ಜನರಿಗೆ, ನಮಗೆ ನೋವುಂಟಾಗಿದೆ ಎಂದು ಹೇಳುತ್ತೇನೆ. ಶ್ರೀ ಮಂಜುನಾಥ್ ಅವರಾಗಲೀ ಶಾಸನಸಭಾ ಸದಸ್ಯರಾಗಿ ಕೆಲಸ ಮಾಡಿದವರಾಗಲೀ ಮಂತ್ರಿಗಳಾಗಿದ್ದವರಾಗಲೀ ನಮ್ಮನ್ನು ಅಗಲಿಹೋಗಿರುವಾಗ ಅವರ ದುಃಖದಲ್ಲಿ ನಾವೂ ಕೂಡ ಸಹಭಾಗಿಗಳು ಎಂದು ಹೇಳಿ ಕೊನೆಯದಾಗಿ ಒಂದು ಮಾತು ಹೇಳುತ್ತೇನೆ. ಶ್ರೀ ರಾಮದೇವ್ ಅವರು ಮತ್ತು ಆನಂದರಾವ್ ಅವರು ಬಹಳ ಬಡತನ ಪರಿಸ್ಥಿತಿಯಿಂದ ಬಂದಂಥ ವ್ಯಕ್ತಿಗಳಾಗಿದ್ದರು. ಅವರ ಕುಟುಂಬದವರು ಬಹಳ ಕಷ್ಟದ ಪರಿಸ್ಥಿತಿಯಲ್ಲಿ ಜೀವನ ಮಾಡು

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ತ್ತಿದ್ದಾರೆ ಎಂದು ಗೊತ್ತಾಗಿದೆ. ಆದಕ್ಕೇನಾದರೂ ಸರ್ಕಾರದ ಪರವಾಗಿ ಸಹಾಯ ಮಾಡಲಿಕೆ. ಆಗುತ್ತದೆಯೇ ಎಂದು ನೋಡಬೇಕು. ಮತ್ತು ಆ ರೀತಿ ಸಹಾಯ ಮಾಡಬೇಕು ಎಂಬ ಮಾತನ್ನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳಿ ನೆರೆಹಾವಳಿಯಲ್ಲಿ ಬಹಳ ಬಡಜನರು ತೊಂದರೆಪಟ್ಟಿದ್ದಾರೆ ಅದಕ್ಕೆ ನಾನು ವೈಯಕ್ತಿಕವಾಗಿ ನನ್ನ ಸಂತಾಪವನ್ನು ವ್ಯಕ್ತಪಡಿಸಿ ಭಗವಂತನು ಅವರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ಕೊಡಲೆಂದು ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳತ್ನು ಮುಗಿಸುತ್ತೇನೆ.

SRI B. I. PATIL (Uchgaon).—Mr. Speaker Sir. on behalf of M. harastra Ekikarana Samithi I rise to condole the death of Sriyuths: T.M. Manjunath, Ma Siddamadaiah, S.F. Patil who were all sitting members and Surendranath, the former Governor of Punjab State.

I also condole the death of some of Ex-Members of this House who have passed away recently.

Sri T.M. Manjunath was serving as the Minister for Sugar in the present Cabinet. He served the State and his constituency with dedication

Sri S. F. Patil, who represented Nargund Constituency in Dharwad District was a champion in the field of co-operative movement. He was a Chairman of the Karnataka Jungle Lodges and Resorts. His contribution was immense in the public field.

I also express my sympathies to the members of the families who suffered due to loss of life and property in the recent flood havoc in several parts of our State. Thank you sir.

ಶ್ರೀ ಜಿ. ರಾಜೂಗೌಡ (ಹನೂರು).—ಸನ್ಮಾನ್ಯ ಅಧ್ಯಕ್ಷರೇ, ತಾವು ಸದನದ ಮುಂದೆ ಮಂಡಿಸಿರ ತಕ್ಕ ಸಂತಾಪಸೂಚನಾ ನಿರ್ಣಯಕ್ಕೆ ನಾನು ನನ್ನ ಸಹಾನುಭೂತಿಯನ್ನು ವ್ಯಕ್ತಪಡಿಸುತ್ತಾ, ಪ್ರಸ್ತುತ ವಿಧಾನಸಭೆಯ ಹಾಗೂ ಹಿಂದಿನ ವಿಧಾನಸಭೆಯ ಅನೇಕ ಗಣ್ಯ ಶಾಸಕರನ್ನು ಕಳೆದುಕೊಂಡು ತಮ್ಮೆಲ್ಲರಿಗೂ ನಷ್ಟವಾಗಿದೆ. ಹಾಲಿ ವಿಧಾನಸಭೆಯ ಮೂರುಜನ ಶ್ರೇಷ್ಠ ಮಟ್ಟದ ಸಂಸದೀಯಪಟು ಗಳನ್ನು ಕಳೆದುಕೊಂಡು ಬಹುಶಃ ಈ ಸದನ ಬಡವಾಗಿದೆ ಎಂದು ನಾನು ತಿಳಿದುಕೊಂಡಿದ್ದೇನೆ. ಮೂರೂ ಜನರೂ ಅನೇಕ ಬಾರಿ ಆಯ್ಕೆಯಾಗಿದ್ದವರು. ಅವರು ಹೆಚ್ಚಿನ ಜನಪ್ರಿಯರಾಗವುದಕ್ಕೆ ಇದೇ ಒಂದು ಸಾಕ್ಷಿ. ಮಂಜುನಾಥ್ ಅವರು ರಾಜ್ಯದ ಮಂತ್ರಿಗಳಾಗಿ ಅಮೋಘ ಸೇವೆಯನ್ನು ಸಲ್ಲಿಸಿದ್ದಾರೆ. ಮೂವರೂ ಕೂಡ ಸಹೋದ್ಯೋಗಿಗಳು ಮಿತಭಾಷಿಗಳು, ಆಚಾರ ವಿಚಾರಗಳಲ್ಲಿ ಒಳ್ಳೆಯ ವ್ಯವಹಾರಿಗಳಾಗಿದ್ದವರು. ಅದರಲ್ಲೂ ಕೂಡ ನನ್ನ ಜಿಲ್ಲೆಯ ಸಿದ್ದಮಾದಯ್ಯನವರು, ಶ್ರೀಮಾನ್ ಬಸವರಾಜ್‌ರವರು, ಶ್ರೀಮಾನ್ ಎಂ. ಮಾದಯ್ಯನವರು ಅನೇಕ ವಿಧದಲ್ಲಿ ಸೇವೆ ಸಲ್ಲಿಸಿ ದ್ದಾರೆ. ಸಿದ್ದಮಾದಯ್ಯನವರು ಹೊಳಲಸಂದ್ರದಿಂದ ಮೂರು ಬಾರಿ ಆಯ್ಕೆಯಾಗಿದ್ದರು. ಅವರು ದಿವಂಗತರಾಗದಿದ್ದರೆ ಈ ಸಾರಿಯೂ ಜಯಶೀಲರಾಗುತ್ತಿದ್ದರು, ಮೊಟ್ಟ ಮೊದಲನೆಯದಾಗಿ ಸಿದ್ಧಮಾದಯ್ಯನವರು ವಿಧಾನಸಭೆಗೆ ಆಯ್ಕೆಯಾದಾಗ, ಈ ರಾಜ್ಯದಲ್ಲಿ ಐ.ಎ.ಎಸ್. ಅಧಿಕಾರಿಗಳಾಗಿ ಗಣನೀಯ ಸೇವೆ ಸಲ್ಲಿಸಿದಂತಹ ಭರಣಯ್ಯನವರನ್ನು ಸೋಲಿಸಿದಾಗ ಅವರನ್ನು ನೋಡಲು ಜನ ಕಿಕ್ಕಿರಿದು ಸೇರಿದ್ದರು. ರಾಜ್ಯಕ್ಕೆ ಒಳ್ಳೆಯ ಸೇವೆ ಸಲ್ಲಿಸಿದ್ದ ಭರಣಯ್ಯನವರನ್ನೇ ಸೋಲಿಸಿದಂತಹ ವ್ಯಕ್ತಿ ಸಿದ್ದಮಾದಯ್ಯನವರು ಯಾರೆಂದು ನೋಡಲು ಜನ ಸೇರಿದ್ದರು. ಸರಳಜೀವಿಗಳು, ಪ್ರಾಮಾಣಿಕರು, ಶುದ್ಧಹಸ್ತದವರು. ಅಂತಹವರನ್ನು ಕಳೆದುಕೊಂಡದ್ದು ನಿಜಕ್ಕೂ ನಮ್ಮ ಜಿಲ್ಲೆಗೆ, ನಮ್ಮ ತಾಲ್ಲೂಕಿಗೆ ಹೆಚ್ಚಿನ ನಷ್ಟವಾಗಿದೆ ಎಂದು ಹೇಳಿ ಈ ಮೂರೂ ಜನ ಗಣ್ಯರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನು ನೀಡಲಿ ಹಾಗೂ ಮೃತರ ಕುಟುಂಬ ವರ್ಗಕ್ಕೆ ದುಃಖವನ್ನು ಭರಿಸುವ ಶಕ್ತಿಯನ್ನು ಕೊಡಲಿ ಎಂದು ಹೇಳಿ ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಸಿ. ವೀರಭದ್ರಯ್ಯ (ಕೊರಟಗೆರೆ).—ಸನ್ಮಾನ್ಯ ಅಧ್ಯಕ್ಷರೇ, ತಾವು ಮಂಡಿಸಿರತಕ್ಕ ಸೂಚನೆಯನ್ನು ಬೆಂಬಲಿಸುತ್ತಾ, ನಮ್ಮ ಜಿಲ್ಲೆಯವರೇ ಆದ ಸನ್ಮಾನ್ಯ ದಿವಂಗತ ಮಂಜುನಾಥ್ ಅವರ ಬಗ್ಗೆ ಎರಡು ಮಾತುಗಳನ್ನು ಹೇಳಬಯಸುತ್ತೇನೆ. ದಿವಂಗತ ಮಂಜುನಾಥ್ ಅವರು ಕಳೆದ ವರ್ಷಗಳಿಂದ ನನ್ನ ಜೊತೆ ಇದ್ದರು. ಅವರು ಮಂತ್ರಿಸ್ಥಾನದಲ್ಲಿ ಇದ್ದರೂ ಕೂಡ ದಿನ ಬೆಳಿಗ್ಗೆ ನನ್ನ ಕೊಠಡಿಗೆ ಬಂದು ಜಿಲ್ಲೆಯ ಕಷ್ಟ ಸುಖದ ಬಗ್ಗೆ ಮಾತನಾಡುತ್ತಿದ್ದರು. ಗುರು ಹಿರಿಯರಲ್ಲಿ, ದೇವರಲ್ಲಿ ವಿಶೇಷವಾದ ಶ್ರದ್ಧೆ ಇಟ್ಟಿದ್ದವರು, ಸರಳ ಸ್ವಭಾವದವರು. ಅವರು ಮೂರು ಸಾರಿ ವಿಧಾನಸಭೆಯ ಸದಸ್ಯರಾಗಿ, ತಾಲ್ಲೂಕು ಬೋರ್ಡ್ ಸದಸ್ಯರಾಗಿ, ನಗರಸಭೆಯ ಸದಸ್ಯರಾಗಿ, ವರ್ತಕ ಸಂಘದ ಅಧ್ಯಕ್ಷರಾಗಿ, ಕೆಲವರು ಕಾಲೇಜಿನ ಅಧ್ಯಕ್ಷರಾಗಿ ಅಪಾರವಾದ ಸೇವೆಯನ್ನು ಸಲ್ಲಿಸಿದ್ದಾರೆ. ಮತ್ತು ಯಾರ ಬಗ್ಗೆಯಾಗಲೀ, ವಿರೋಧಪಕ್ಷದವರ ಬಗ್ಗೆ ಆಗಲೀ ಅಥವಾ ತನ್ನ ವಿರೋಧಿಗಳ ಬಗ್ಗೆಯಾಗಲೀ, ಯಾವತ್ತೂ ಸಹಾ ಅವರು ಬಾಯಿ ಮಾತಿನಲ್ಲಿಯಾಗಲೀ ಅಥವಾ ಹೇಗೆ ಆಗಲೀ ವಿರೋಧ ಮಾಡಿದವರಲ್ಲ. ಸಂಕುಚಿತ ಬುದ್ಧಿ ಅವರಲ್ಲಿ ಇರಲಿಲ್ಲ. ಅನೇಕ ಸಲ ನಮ್ಮಂಥವರಿಗೂ ಬುದ್ಧಿ ಹೇಳುತ್ತಿದ್ದರು. ರಾಜಕೀಯದಲ್ಲಿ ಹೀಗಿರಬೇಕೆಂದು ಹೇಳುತ್ತಿದ್ದರು. ತಿಪಟೂರು ತಾಲ್ಲೂಕಿನ ಅವರ ಕ್ಷೇತ್ರದ ಬಗ್ಗೆ ವಿಶೇಷವಾದ ಆಸಕ್ತಿಯನ್ನು ಉಳ್ಳವರಾಗಿದ್ದು ಯಾರೇ ಬಡವರು ಬಂದರೂ ಅವರನ್ನು ಕರೆದು ಮಾತನಾಡಿಸಿ ಕಷ್ಟಸುಖ ವಿಚಾರ ಮಾಡುತ್ತಿದ್ದರು. ಮಂತ್ರಿಗಳಾಗಿದ್ದರೂ ಕಡುಬಡವರನ್ನು ಅಪಾರ ಪ್ರೀತಿಯಿಂದ ಕರೆಸಿ ಮಾತನಾಡಿ ಕೆಲಸ ಮಾಡುತ್ತಿದ್ದರು. ಅವರು ಕೆಲಸವನ್ನು ಹಗಲು ರಾತ್ರಿ ಮಾಡುತ್ತಿದ್ದರು. ಅಂತಹವರು ದೂರವಾಗಿದ್ದು ಈ ಸದನಕ್ಕೆ ಮತ್ತು ರಾಜ್ಯಕ್ಕೆ ಕೂಡಲಾರದ ವ್ಯಸನವಾಗಿದೆ. ಮೃತರ ಕುಟುಂಬವರ್ಗದವರಿಗೆ ದುಃಖವನ್ನು ಭರಿಸುವ ಶಕ್ತಿಯನ್ನು ದಯಪಾಲಿಸಲಿ ಹಾಗೂ ಮೃತರ ಆತ್ಮಕ್ಕೆ ಶಾಂತಿ ಸಿಗಲಿ ಎಂದು ಭಗವಂತನಲ್ಲಿ ಪ್ರಾರ್ಥಿಸಿಕೊಂಡು ನನ್ನ ನಾಲ್ಕು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಮೃತಪಟ್ಟವರ ಗೌರವಾರ್ಥ ಮಾನ್ಯ ಸದಸ್ಯರೆಲ್ಲರೂ ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನವು ಎದ್ದು ನಿಂತು ಒಂದು ನಿಮಿಷ ಮೌನವನ್ನಾಚರಿಸಿತು)

ಅಧ್ಯಕ್ಷರು.—ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯಗಳನ್ನು ಮೃತರ ಕುಟುಂಬವರ್ಗದವರಿಗೆ ಕಳುಹಿಸಿಕೊಡಲಾಗುವುದು. ಈಗ ಸಭೆಯ ಕಾರ್ಯಕಲಾಪಗಳು ಮುಂದುವರೆದು ಮತ್ತೆ ನಾಳೆ ಬೆಳಿಗ್ಗೆ ೧೧–೦೦ ಗಂಟೆಗೆ ಪ್ರಾರಂಭವಾಗುವುದು.

(ಸದನವು ಮಧ್ಯಾಹ್ನ ೧೨ ಗಂಟೆ ೧ ನಿಮಿಷಕ್ಕೆ ಮುಕ್ತಾಯವಾಗಿ ಪುನಃ ದಿನಾಂಕ ೨೬ನೇ ಆಗಸ್ಟ್ ಮಾಹೆ ೧೯೯೪ರ ಶುಕ್ರವಾರ ಬೆಳಿಗ್ಗೆ ೧೧ ಗಂಟೆಗೆ ಸೇರಲು ನಿಶ್ಚಯಿಸಿತು.)